ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಮಾನ್ಯ ಅಧ್ಯಕ್ಷರು, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯ ಯೋಜನಾ ಪ್ರಾಧಿಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:04.11.2020ರಂದು ಅಪರಾಹ್ನ 03.00 ಘಂಟೆಗೆ ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ನಡಾವಳಿ

ಕ್ರಮ ಸಂಖ್ಯೆ	ಹಾಜರಿದ್ದ ಸದಸ್ಯರು	
1	ಮಾನ್ಯ ಅಧ್ಯಕ್ಷರು, ಬಿಎಂಐಸಿಎಪಿಎ ಹಾಗೂ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಬೆಂಗಳೂರು.	ಅಧ್ಯಕ್ಷರು
2	ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.	ಸದಸ್ಯರು
3	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ	ಸದಸ್ಯರು
4	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿಎಂಐಸಿಎಪಿಎ. ಬೆಂಗಳೂರು.	ಸದಸ್ಯರು
5	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು	ಸದಸ್ಯರು
6	ರಾಮನಗರ ಮುನಿಸಿಪಲ್ ಕಮಿಷನರ್, ರಾಮನಗರ, ರಾಮನಗರ ಜಿಲ್ಲೆ	ಸದಸ್ಯರು
ಸದಸ್ಯರ ಪರವಾಗಿ ಹಾಜರಿದ್ದ ಅಧಿಕಾರಿಗಳು		
7	ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ಸದಸ್ಯರು
8	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ಬೆಂಗಳೂರು	ಸದಸ್ಯರು
9	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.	ಸದಸ್ಯರು
ಹಾಜರಿದ್ದ ವಿಶೇಷ ಆಹ್ವಾನಿತರು		
10	ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.	
11	ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	
12	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.	
ಗೈರು ಹಾಜರಾದ ಅಧಿಕಾರಿಗಳು		
13	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು	ಸದಸ್ಯರು
14	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.	ಸದಸ್ಯರು
15	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ಜಿಲ್ಲೆ, ರಾಮನಗರ	ಸದಸ್ಯರು
16	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು	ಸದಸ್ಯರು
ಗೈರು ಹಾಜರಾದ ವಿಶೇಷ ಆಹ್ವಾನಿತರು		
17	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ	
18	ಸಮನ್ವಯ ಅಧಿಕಾರಿಗಳು, ಬಿಎಂಐಸಿಪಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	

1) ದಿನಾಂಕ:07.09.2020ರಂದು ನಡೆದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು.

*****

ದಿನಾಂಕ:07.09.2020ರಂದು ನಡೆದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಕುರಿತು.

ತೀರ್ಮಾನ:

ದಿನಾಂಕ:07.09.2020ರಂದು ನಡೆದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಓದಿ ದೃಢೀಕರಿಸಲಾಯಿತು.

2) ದಿನಾಂಕ: 07.09.2020ರಂದು ನಡೆದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮದ ಸಂಬಂಧ ಪಾಲನಾ ವರದಿ.

*****

ದಿನಾಂಕ:07.09.2020ರಂದು ನಡೆದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮಗಳ ಕುರಿತು ಪಾಲನಾ ವರದಿಯನ್ನು ಈ ಕೆಳಕಂಡಂತೆ ಮಂಡಿಸಿದೆ.

ವಿಷಯ ಸಂಖ್ಯೆ	ವಿಷಯ	ತೆಗೆದುಕೊಂಡ ಕ್ರಮ
I	ಆಡಳಿತ ಶಾಖೆ	
2)	ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019ನ್ನು ಪ್ರಾಧಿಕಾರದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕೋರಿರುವ ಸ್ಪಷ್ಟನೆಯನ್ನು ಸರ್ಕಾರದ ಪತ್ರ ಸಂಖ್ಯೆ:ನಅಇ 13 ಟಿಟಿಪಿ 2020 (ಇ–ಕಡತ), ಬೆಂಗಳೂರು ದಿನಾಂಕ:23.10.2020ರಲ್ಲಿ ಸರ್ಕಾರದಿಂದ ಮಾರ್ಗದರ್ಶನ ನೀಡಲಾಗಿದೆ
4)	ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಪ್ರದೇಶ ಯೋಜನಾ ಪ್ರಾಧಿಕಾರದ ಕಛೇರಿ ಕಾರ್ಯಗಳಿಗಾಗಿ ಹೊರಗುತ್ತಿಗೆ ಮುಖಾಂತರ 02 (ಎರಡು) ಎ.ಸಿ. ವಾಹನಗಳ ಸೇವೆಯನ್ನು ಪಡೆಯುವ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕಛೇರಿಯ ಉಪಯೋಗಕ್ಕಾಗಿ ಶ್ರೀ ಚೌಡೇಶ್ವರಿ ಟೂರ್ಸ್ ಅಂಡ್ ಟ್ರಾವೆಲ್ಸ್ ರವರಿಂದ ವಾಹನವನ್ನು ಪಡೆಯಲಾಗಿದೆ
II	**ತಾಂತ್ರಿಕ ಶಾಖೆ**	
III	**ವಿನ್ಯಾಸ ಅನುಮೋದನೆ ಪ್ರಕರಣಗಳು**	
1)	ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮಂಗನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 34/3ರ 0ಎ–11ಗು ಮತ್ತು ಸರ್ವೆ ಸಂಖ್ಯೆ:34/4ರಲ್ಲಿ 02ಎ–28ಗು ಒಟ್ಟು 02ಎ–39ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ವೈ.ಹೆಚ್.ಶಿವರಾಮೇಗೌಡ ಬಿನ್ ಲೇಟ್ ವೈ.ಕೆ.ಹುಚ್ಚ ಮಾಸ್ತಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿದೆ

2)	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ: 87/1ರ ಪೈಕಿ 02ಎ–35ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀ ಜಿ.ವಿ.ನಾಗೇಶ್ ಬಿನ್ ಜಿ.ವಿ.ವೆಂಕಟರಾಮ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಅರ್ಜಿದಾರರಿಗೆ ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ನಿವೇಶನಗಳನ್ನು ಸ್ಥಳೀಯ ಸಂಸ್ಥೆ ಹಾಗೂ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಪರಿತ್ಯಜನಾ ಪತ್ರಗಳನ್ನು ಪರಿಶೀಲನೆಗೆ ಸಲ್ಲಿಸಲು ತಿಳಿಸಲಾಗಿದೆ
3)	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:625/1ರ 0ಎ–10ಗು ಮತ್ತು ಸರ್ವೆ ಸಂಖ್ಯೆ:625/4ರ 02ಎ–33ಗು ಒಟ್ಟು 03ಎ–03ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀಮತಿ ಧನಲಕ್ಷ್ಮೀ ಕೋಂ ಲೇಟ್ ಪಿ.ಮಹದೇವು ಮತ್ತು ಶ್ರೀ ಬೋಳಾರೇಗೌಡ ಬಿನ್ ಲೇಟ್ ಪುಟ್ಟೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಾಧಿಕಾರಕ್ಕೆ ನಾಗರೀಕ ಸೌಲಭ್ಯ ನಿವೇಶನ ಹಸ್ತಾಂತರಿಸಲು ಮತ್ತು ರಸ್ತೆ ಉದ್ಯಾನವನ ಪ್ರದೇಶವನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲು ಪರಿತ್ಯಜನಾ ಪತ್ರ ಪರಿಶೀಲನೆಗೆ ಸಲ್ಲಿಸಲು ತಿಳಿಸಲಾಗಿದೆ.
4)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ:379/1ರ 0ಎ–02ಗು, 379/2ರ 01ಎ–14ಗು, 379/4ರ 01ಎ–14ಗು ಮತ್ತು ಸರ್ವೆ ಸಂಖ್ಯೆ:379/5ರ 01ಎ–15ಗು ಒಟ್ಟು 04ಎ–05ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀ ಮೊಹಮದ್ ಇನಾಯತ್ ಉಲ್ಲಾ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಾಧಿಕಾರಕ್ಕೆ ನಾಗರೀಕ ಸೌಲಭ್ಯ ನಿವೇಶನ ಹಸ್ತಾಂತರಿಸಲು ಮತ್ತು ರಸ್ತೆ ಉದ್ಯಾನವನ ಪ್ರದೇಶವನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲು ಪರಿತ್ಯಜನಾ ಪತ್ರ ಪರಿಶೀಲನೆಗೆ ಸಲ್ಲಿಸಲು ತಿಳಿಸಲಾಗಿದೆ.
5)	ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:11/5 (ಹಳೆ ಸರ್ವೆ ಸಂಖ್ಯೆ:11/1)ರಲ್ಲಿನ ಒಟ್ಟು 04ಎ–31ಗು ವಿಸ್ತೀರ್ಣದ ಜಮೀನಿನಲ್ಲಿ ಅನುಮೋದನೆ ನೀಡಿರುವ ವಸತಿ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿ ಶ್ರೀ ವೆಂಕಟರಮಣರೆಡ್ಡಿ ಬಿನ್ ಲೇಟ್ ಅಜ್ಜನರೆಡ್ಡಿ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
6)	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:110/6ರ 01ಎ–07ಗು (0ಎ–17ಗು ಖರಾಬು ಹೊರತುಪಡಿಸಿ), 110/7ರ 02ಎಕರೆ (0ಎ–01ಗು ಖರಾಬು ಮತ್ತು 0ಎ–03ಗು ಹೊರತುಪಡಿಸಿ), 110/8ರ 01ಎಕರೆ, 110/9ರ 01ಎ–20ಗು, 110/10ರ 0ಎ–20ಗು ಮತ್ತು ಸರ್ವೆ ಸಂಖ್ಯೆ:110/11ರ 0ಎ–17ಗು (0ಎ–05ಗು ಖರಾಬು ಹೊರತುಪಡಿಸಿ) ಒಟ್ಟು 06ಎ–24ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಸಂಕೇಶ್ವರ್ ವೆಂಚರ್ಸ್(6.5), ಶ್ರೀ ಇರ್‌ಫಾನ್ ವಜೀರ್, ಶ್ರೀ ಎಂ.ಎಸ್.ಸಿದ್ದು ಮತ್ತು ಶ್ರೀ ಪ್ರಕಾಶ್ ಭನ್ಸಾಲಿ ಇವರುಗಳು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಅರ್ಜಿದಾರರಿಗೆ ಶುಲ್ಕ ಪಾವತಿಸಲು ಶುಲ್ಕ ಪಾವತಿ ನೋಟೀಸ್ ನೀಡಲಾಗಿದೆ
7)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:101ರ 04ಎ–07ಗು ಪೈಕಿ 03ಎ–33ಗು ಮತ್ತು ಸರ್ವೆ ಸಂಖ್ಯೆ: 104/1 (ಹಳೆ ಸರ್ವೆ ಸಂಖ್ಯೆ:104) 02ಎ–26ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ರೋಲ್ಯಾಂಡ್ ಮೆಡೋಸ್ ಎಸ್ಟೇಟ್ ಪ್ರೈ.ಲಿ. ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ

8)	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸ.ಸಂ.39/1ಬಿ2ರ 0ಎ–20ಗು, 39/1ಬಿ3ರ 0ಎ–20ಗು, 40/1ರ 02ಎ–22ಗು, 40/3ರ 0ಎ–20ಗು, 40/5ರ 01ಎ–20ಗು, 41/6ರ 0ಎ–17ಗು, 41/7ರ 01ಎ–27ಗು, 41/8ರ 0ಎ–32ಗು, 42/1ರ 0ಎ–10ಗು, 42/4ರ 0ಎ–12ಗು, ಮತ್ತು 42/5ರ 02ಎ–02ಗು ಒಟ್ಟು 11ಎ–02ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ಪುಟ್ಟಸ್ವಾಮಿ ಕೆ ಬಿನ್ ಕಾಳೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಅರ್ಜಿದಾರರಿಗೆ ಶುಲ್ಕ ಪಾವತಿಸಲು ಶುಲ್ಕ ಪಾವತಿ ನೋಟೀಸ್ ನೀಡಲಾಗಿದೆ
9)	ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಗೋಕುಲ್ ಡೆವಲಪರ್ಸ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಅರ್ಜಿದಾರರಿಗೆ ತಿಳಿಸಲಾಗಿದೆ.
10)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ:173ರ 05ಎ–28ಗು, 262/1ರ 01ಎ–08ಗು, 262/2ರ 02ಎ–09ಗು, 163/4ರ 01ಎ–07ಗು, 162/4ರ 02ಎ–02ಗು ಮತ್ತು ಸರ್ವೆ ಸಂಖ್ಯೆ:164/4ರ 01ಎ–18ಗು ಒಟ್ಟು 13ಎ–32ಗು ವಿಸ್ತೀರ್ಣದ ಜಮೀನಿನಲ್ಲಿ ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ಸಂಬಂಧ ಶುಲ್ಕ ಪಾವತಿಸಲು ಕಾಲಾವಕಾಶವನ್ನು ಕೋರಿ ಅರ್ಜಿದಾರರಾದ ಶ್ರೀ ಎಸ್.ಸಂಜಯ್ ಬಾಬು ಬಿನ್ ಎಸ್.ವಿ.ಬಾಬು ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಅರ್ಜಿದಾರರಿಗೆ ಶುಲ್ಕ ಪಾವತಿಸಲು ಶುಲ್ಕ ಪಾವತಿ ನೋಟೀಸ್ ನೀಡಲಾಗಿದೆ
IV	**ದಿನಾಂಕ:20.01.2020ರಂದು ಜರುಗಿದ ಪ್ರಾಧಿಕಾರದ 64ನೇ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಮುಂದೂಡಲಾದ ಪ್ರಕರಣಗಳು**	
1)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಳೂರು ಗ್ರಾಮದ ಸರ್ವೆ ಸಂಖ್ಯೆ:1005/3ರ 0ಎ–18ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಕಲ್ಯಾಣ ಮಂಟಪ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಟಿ.ಮಂಜುಳ ಕೋಂ ಎಂ.ಬಿ.ಕೃಷ್ಣಪ್ಪ ಇವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
2)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:165/1ರ 01ಎ–10ಗು ಪೈಕಿ 01ಎ–06ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಪೆಟ್ರೋಲ್ ಬಂಕ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಸಾವಿತ್ರಮ್ಮ ಕೋಂ ಲೇಟ್ ನಾರಾಯಣಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
3)	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 287ರ 0ಎ–20ಗು ಮತ್ತು ಸರ್ವೆ ಸಂಖ್ಯೆ:347ರ 01ಎ–29ಗು ಒಟ್ಟು 02ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.

	ಬದಲಾವಣೆ ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಮೈಸೂರು ಉಪವಿಭಾಗ, ಮೈಸೂರು ಇವರು ಸಲ್ಲಿಸಿರುವ ಮನವಿ ಕುರಿತು.	
4)	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತರೀಪುರ ಗ್ರಾಮದ ಸರ್ವೆ ಸಂಖ್ಯೆ:236/2ರ 01ಎ–07ಗು ಮತ್ತು ಸರ್ವೆ ಸಂಖ್ಯೆ:237/2ರ 02ಎ–30ಗು ಒಟ್ಟು 03ಎ–37ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಮುಬೀನುನ್ನೀಸಾ ಕೋಂ ಮುಸ್ತಾಕ್ ಆಲಿ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
5)	ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:133/7ರ 0ಎ–20ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎಸ್.ಪಿ.ಗೋಪಾಲಕೃಷ್ಣ ಬಿನ್ ಶ್ರೀ ಪುಟ್ಟಸ್ವಾಮಿಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
6)	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ: 222ರ 03ಎ–39ಗು, ಸರ್ವೆ ಸಂಖ್ಯೆ: 225/1ರ 02ಎ–22ಗು, ಸರ್ವೆ ಸಂಖ್ಯೆ: 239ರ 03ಎ–01ಗು ಸರ್ವೆ ಸಂಖ್ಯೆ:240/2ರ 0ಎ–05ಗು ಮತ್ತು ಸರ್ವೆ ಸಂಖ್ಯೆ:240/2ರ 0ಎ–11ಗು, ಸರ್ವೆ ಸಂಖ್ಯೆ:244/1ರ 02ಎ–10ಗು, ಸರ್ವೆ ಸಂಖ್ಯೆ: 244/2ರ 02ಎಕರೆ ಮತ್ತು ಸರ್ವೆ ಸಂಖ್ಯೆ:245ರ 01ಎ–09ಗು ಒಟ್ಟು 15ಎ–17ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಬಾಲಾಜಿ ಬಾಬು.ಜೆ ಬಿನ್ ಜಗನ್ನಾಥ್.ವಿ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
7)	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:266ರ 02ಎಕರೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ (Information Technology SEZ) ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮೆ॥ ಭುವನ ಕಂಫರ್ಟ್ಸ್ ಪ್ರೈ.ಲಿ.ನ ನಿರ್ದೇಶಕರು, ಶ್ರೀ ವಿ.ನಾಗೇಶ್ ಮತ್ತು ಶ್ರೀ ಎಂ.ವಿ.ರಾಯ್ಡು ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
V	**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರಡಿಯಲ್ಲಿ ಭೂ ಉಪಯೋಗ ನಿಗಧಿಪಡಿಸುವ ಪ್ರಕರಣಗಳು**	
1)	ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:3/3ರ 0ಎ–04½ಗು ವಿಸ್ತೀರ್ಣದ ಜಮೀನನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಕೆ.ಟಿ.ಸಿ.ಪಿ (ತಿದ್ದುಪಡಿ) ಕಾಯ್ದೆ 2015 ಕಲಂ 69(3)ರಡಿಯಲ್ಲಿ ಭೂ ಉಪಯೋಗ ನಿಗಧಿಪಡಿಸಲು ಕೋರಿ ಡಾ॥ ಕೆ.ಪ್ರದೀಪ್ ಕುಮಾರ್ ಬಿನ್ ಕೆ.ಕೃಷ್ಣಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ

VI	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಪ್ರಕರಣಗಳು	
1)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:43/6ರ ಒಟ್ಟು 0ಎ–33ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ನರ್ಸಿಂಗ್ ಹೋಂ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಡಾ.ಸಿ.ರಾಮು ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
2)	ಮಂಡ್ಯ ತಾಲ್ಲೂಕು, ಕೊತ್ತತ್ತಿ ಹೋಬಳಿ, ಸೂನಗನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:33/6ರ 0ಎ–03ಗು ಮತ್ತು ಸರ್ವೆ ಸಂಖ್ಯೆ:33/9ರ 0ಎ–10ಗು ಒಟ್ಟು 0ಎ–13ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಫರ್ನಿಚರ್ ಫ್ಯಾಕ್ಟರಿ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಈಶ್ವರಾಚಾರಿ ಬಿನ್ ಲೇಟ್ ಮರಿಯಾಚಾರಿ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
3)	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 54/2ರ 01ಎ–01ಗು, 54/3ರ 01ಎ–00ಗು, 54/4ರ 0ಎ–17ಗು, 54/5 ರ 0ಎ–20ಗು, 70/2 ರ 01ಎ–00ಗು, 71/1 ರ 01ಎ–03ಗು, 71/2ರ 0ಎ–17$^{1}/_{2}$ಗು, 71/3ರ 0ಎ–17$^{1}/_{2}$ಗು 85/1 ರ 01ಎ–07ಗು, 85/2 ರ 01ಎ–07ಗು, 86/1ರ 0ಎ–20ಗು, 86/2ರ 0ಎ–15ಗು, ಮತ್ತು 86/3ರ 0ಎ–33ಗು ಒಟ್ಟು 09ಎ–38ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಮಂಜೇಗೌಡ, ಶ್ರೀ ದೊರೆಸ್ವಾಮಿ ಮತ್ತು ಇತರರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
4)	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:350/2ರ 02ಎ–30ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸಿ ನಾರಾಯಣ ಬಿನ್ ಲೇಟ್ ಚಲುವಪ್ಪ ಮತ್ತು ಸಾಕಮ್ಮ ರವರ ಜಿಪಿಎ ದಾರರಾದ ಶ್ರೀ ಎನ್.ಹೆಚ್ ಕುಮಾರ್, ಶ್ರೀ ಎಂ.ಇ ಕೋಟ್ರೇಶ್, ಶ್ರೀ ಬಿ.ಎಸ್ ಶಿವಣ್ಣ, ಶ್ರೀ ವಿ.ಎಂ ಶಿವನಂಜು, ಶ್ರೀ ಎಂ.ಎನ್ ಕೆಂಪೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
5)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/8ರ 0ಎ–20ಗು, 31/2ರ 0ಎ–15ಗು, 31/5ರ 0ಎ–15ಗು, 31/6ರ 02ಎ–10ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಒಟ್ಟು 04ಎ–10ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸೈಯದ್ ಮಕ್ಬೂಲ್ ಅಹಮದ್ ಮತ್ತು ಇತರರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
6)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 56/2ರ 01ಎಕರೆ, 57/6ರ 01ಎ–10ಗು, 57/7ರ 02ಎ–32ಗು ಮತ್ತು ಸರ್ವೆ ಸಂಖ್ಯೆ:57/16ರ 01ಎಕರೆ ಒಟ್ಟು 06ಎ–02ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸೈಯದ್ ಮಕ್ಬೂಲ್ ಅಹಮದ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.

7)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:141/3ರ 0ಎ–20ಗು, 180/1ರ 02ಎ–00ಗು, 180/4ರ 0ಎ–30ಗು, 180/5ರ 02ಎ–00ಗು ಮತ್ತು ಸರ್ವೆ ಸಂಖ್ಯೆ:181/2ರ 01ಎ–14ಗು ಒಟ್ಟು 06ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸೈಯದ್ ಸಿದ್ದಿಕ್ ಅಹಮದ್ ಮತ್ತು ಇತರರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
8)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:146/2ರ 0ಎ–28ಗು ಮತ್ತು ಸರ್ವೆ ಸಂಖ್ಯೆ:146/8ರ 0ಎ–30ಗು ಒಟ್ಟು 01ಎ–18ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (Retail Shopping Complex/Office Complex) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸೈಯದ್ ಮಕ್ಬೂಲ್ ಅಹಮದ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
9)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 175/3ರ 0ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಚಿಕ್ಕಣ್ಣ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
10)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ವಾಜರಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 35/5ರ 02ಎ–39ಗು (ರಾಷ್ಟ್ರೀಯ ಹೆದ್ದಾರಿಗೆ ಭೂ ಸ್ವಾಧೀನವಾಗಿರುವ 0ಎ–01ಗು ಜಮೀನನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಕೆ.ಮಂಜು ಬಿನ್ ಕರಿಯಪ್ಪ ಮತ್ತು ಶ್ರೀಮತಿ ಲಕ್ಷ್ಮಿ ಮಂಜು ಕೋಂ ಕೆ.ಮಂಜು ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
11)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಅವರೆಗೆರೆ ಗ್ರಾಮದ ಸರ್ವೆ ಸಂಖ್ಯೆ:16/14ರ 0ಎ–37½ಗು ಮತ್ತು ಸರ್ವೆ ಸಂಖ್ಯೆ:16/15ರ 0ಎ–23ಗು ಒಟ್ಟು 01ಎ–20½ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ರುದ್ರಪ್ಪ ಬಿನ್ ಲೇಟ್ ಚಲುವಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
12)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಳೂರು ಗ್ರಾಮದ ಸರ್ವೆ ಸಂಖ್ಯೆ:315/7ರ 0ಎ–11ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ ಮತ್ತು ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಮಂಜುಳ ಕೆ.ಎನ್ ಕೋಂ ಎ.ಪಿ.ಬೋರಲಿಂಗಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಾಮಾನ್ಯ ಸಭೆಯ ತೀರ್ಮಾನದಂತೆ ಮಾಹಿತಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿದೆ.
13)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಳೂರು ಗ್ರಾಮದ ಸರ್ವೆ ಸಂಖ್ಯೆ:315/4ರ 0ಎ–07ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ ಮತ್ತು ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಶ್ರೀನಿವಾಸು ಬಿನ್ ಲೇಟ್ ಗಿರಿಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಾಮಾನ್ಯ ಸಭೆಯ ತೀರ್ಮಾನದಂತೆ ಮಾಹಿತಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿದೆ.

14)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಳೂರು ಗ್ರಾಮದ ಸರ್ವೆ ಸಂಖ್ಯೆ:315/2ರ 0ಎ–02½ಗು ಮತ್ತು ಸರ್ವೆ ಸಂಖ್ಯೆ:315/5ರ 0ಎ–01½ಗು ಒಟ್ಟು 0ಎ–04ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ ಮತ್ತು ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಡಿ.ನಾಗರಾಜು ಬಿನ್ ಲೇಟ್ ದೊಡ್ಡಚಾರಿ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಾಮಾನ್ಯ ಸಭೆಯ ತೀರ್ಮಾನದಂತೆ ಮಾಹಿತಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿದೆ.
15)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಳೂರು ಗ್ರಾಮದ ಸರ್ವೆ ಸಂಖ್ಯೆ:19/3ರ 0ಎ–5ಗು, 19/4ರ 0ಎ–08ಗು, 19/5ರ 0ಎ–21ಗು, 19/6ರ 0ಎ–17ಗು, 20/3ರ 0ಎ–1½ಗು, 20/4ರ 0ಎ–1½ಗು, 20/5ರ 0ಎ–1½ಗು, 20/6ರ 0ಎ–02ಗು, 20/7ರ 0ಎ–02ಗು, 20/9ರ 0ಎ–14ಗು, 20/10ರ 0ಎ–15ಗು, 21/2ರ 0ಎ–03½ಗು, 21/3ರ 0ಎ–03½ಗು, 21/4ರ 0ಎ–03½ಗು, 21/5ರ 0ಎ–03ಗು ಮತ್ತು ಸರ್ವೆ ಸಂಖ್ಯೆ:21/6ರ 0ಎ–03ಗು ಒಟ್ಟು 02ಎ–25ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ, ಹೋಟೆಲ್ ಮತ್ತು ಕಲ್ಯಾಣ ಮಂಟಪ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಜಿ.ಹೆಚ್.ನಾಗರಾಜು ಬಿನ್ ಲೇಟ್ ಹುಚ್ಚೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಾಮಾನ್ಯ ಸಭೆಯ ತೀರ್ಮಾನದಂತೆ ಮಾಹಿತಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿದೆ.
16)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹೊನ್ನಿಗಾನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 111/3ರ 0ಎ–08¾ಗು (0ಎ–03ಗು 'ಅ' ಖರಾಬು ಸೇರಿ) ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ ಮತ್ತು ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ರಾಜು ಬಿನ್ ಲೇಟ್ ಜಯರಾಮೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಾಮಾನ್ಯ ಸಭೆಯ ತೀರ್ಮಾನದಂತೆ ಮಾಹಿತಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿದೆ.
17)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಳೂರು ಗ್ರಾಮದ ಸರ್ವೆ ಸಂಖ್ಯೆ: 315/6ರ 0ಎ–11ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ ಮತ್ತು ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ರಂಗಪ್ಪ ಬಿನ್ ರಾಮಚಂದ್ರೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಾಮಾನ್ಯ ಸಭೆಯ ತೀರ್ಮಾನದಂತೆ ಮಾಹಿತಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿದೆ.
18)	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಳೂರು ಗ್ರಾಮದ ಸರ್ವೆ ಸಂಖ್ಯೆ:509/1ರ 0ಎ–39ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ ಹೋಟೆಲ್ ಮತ್ತು ಕಲ್ಯಾಣ ಮಂಟಪ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸಿ.ಗೋಪಾಲ್ ಬಿನ್ ಲೇಟ್ ಚನ್ನೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಾಮಾನ್ಯ ಸಭೆಯ ತೀರ್ಮಾನದಂತೆ ಮಾಹಿತಿ ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಲಾಗಿದೆ.
19)	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:285/1ರ 01ಎಕರೆ ಮತ್ತು ಸರ್ವೆ ಸಂಖ್ಯೆ:292/1ರ 02ಎಕರೆ ಒಟ್ಟು 03ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ದೇವೇಗೌಡ ಬಿನ್ ಲೇಟ್ ಹನುಮೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.

20)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಭೀಮೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48ರಲ್ಲಿ 05ಎ–15ಗು ಹಾಗೂ ಲಕ್ಷ್ಮೀಸಾಗರ ಗ್ರಾಮದ ಸರ್ವೆ ಸಂಖ್ಯೆ:18ರಲ್ಲಿ 02ಎ–28ಗು ಮತ್ತು ಸರ್ವೆ ಸಂಖ್ಯೆ:20ರಲ್ಲಿ 04ಎ–23ಗು ಒಟ್ಟು 12ಎ–26ಗು ತಿದ್ದುಪಡಿ ವಿಸ್ತೀರ್ಣಕ್ಕನುಗುಣವಾಗಿ ಹೆಚ್ಚುವರಿ 0ಎ–05ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ (ಶ್ರೀಮತಿ ಸರೋಜಮ್ಮ ಕೋಂ ಬಿ.ರಾಮಲಿಂಗಯ್ಯ ಇವರು ಸಲ್ಲಿಸಿರುವ ಮನವಿ ಕುರಿತು)	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
VII	**ಇತರೆ ಪ್ರಕರಣಗಳು**	
1)	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:180ರ 02ಎಕರೆ ಮತ್ತು ಸರ್ವೆ ಸಂಖ್ಯೆ:179ರ 01ಎ–37ಗು ಒಟ್ಟು 03ಎ–37ಗು ವಿಸ್ತೀರ್ಣದ ಜಮೀನಿನಲ್ಲಿ Quarrying of stones ಉದ್ದೇಶಕ್ಕಾಗಿ ಭೂ ಪರಿವರ್ತನೆ ನಿರಾಕ್ಷೇಪಣಾ ಪತ್ರ ಕೋರಿ ಶ್ರೀ ಹೆಚ್.ಎನ್.ನಾಗರಾಜು ಮತ್ತು ಶ್ರೀ ಎಂ.ನಾಗೇಶ್ ಇವರು ಸಲ್ಲಿಸಿರುವ ಮನವಿ ಬಗ್ಗೆ	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರಿಗೆ ಅಭಿಪ್ರಾಯ ನೀಡಿದೆ
2)	ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬಫರ್ ಜೋನ್ ಅನ್ನು ಪ್ರಾಧಿಕಾರದ ವಲಯ ನಿಯಮಾವಳಿಗಳಲ್ಲಿ ಅಳವಡಿಸುವ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರಿಗೆ ಪತ್ರ ಬರೆಯಲಾಗಿದೆ.
3)	ಪ್ರಾಧಿಕಾರದ ವಲಯ ನಿಯಮಾವಳಿಗಳಲ್ಲಿ Development Plan ಕುರಿತು ನಿಯಮಗಳನ್ನು ಅಳವಡಿಸುವ ಬಗ್ಗೆ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರಿಗೆ ಪತ್ರ ಬರೆಯಲಾಗಿದೆ.
4)	ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧ್ಯಾದೇಶ 2020 ಅನ್ನು ಪ್ರಾಧಿಕಾರದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಅರ್ಜಿದಾರರ ಮನವಿಗಳನ್ನು ದಾಖಲಿಸಿಕೊಳ್ಳಲಾಗಿದೆ
5)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮದ ಸ.ಸಂ.81ರಲ್ಲಿ 08ಎ ಮತ್ತು ಕೆಂಚನಕುಪ್ಪೆ ಗ್ರಾಮದ ಸ.ಸಂ.82, 84, 85, 86, 88, 91, 92, 93, 94 ಮತ್ತು 95ರಲ್ಲಿ 39ಎ ಒಟ್ಟು 47ಎ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ಅಭಿವೃದ್ಧಿಪಡಿಸಲು ಅನುಮೋದನೆ ನೀಡುವ ಬಗ್ಗೆ ಸರ್ಕಾರದಿಂದ ದಿನಾಂಕ:11.01.2019ರಲ್ಲಿ ಈ ಪ್ರಾಧಿಕಾರದ ಅಭಿಪ್ರಾಯ ಕೋರಿರುವ ಕುರಿತು	ಸಭೆಯಲ್ಲಿ ಸ್ಥಿರೀಕರಿಸಲಾಗಿದೆ. ಅದರಂತೆ, ಬಿಡದಿ ಪುರಸಭೆಗೆ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್ ರವರಿಗೆ ಮಾಹಿತಿ ನೀಡಲಾಗಿದೆ
6)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮದ ಸ.ನಂ:157/1ರ 0ಎ–32ಗು, 157/2ರ 0ಎ–03ಗು, 157/3ರ 0ಎ–02ಗು, 157/4ರ 0ಎ–03ಗು, 157/5ರ 0ಎ–06ಗು, 157/6ರ 0ಎ–08ಗು, 157/8ರ 0ಎ–04ಗು, 157/9ರ 01ಎ–10ಗು, 157/19ರ 0ಎ–02ಗು, 157/20ರ 0ಎ–02ಗು ಮತ್ತು 157/21ರ 0ಎ–17ಗು, 158/1ರ 04ಎ–29½ಗು, 158/2ರ 0ಎ–10ಗು, 158/4ರ 01ಎ–10¼ಗು, 158/17ರ 0ಎ–21½ಗು, 158/10ರ 0ಎ–15ಗು 158/12ರ 01ಎ–08¼ಗು, 158/13ರ 01ಎ–14ಗು ಸ.ನಂ:159/1ರ 0ಎ–30ಗು, 159/2ರ 01ಎ–28ಗು, 159/3ರ 01ಎ–38ಗು, 159/4ರ 0ಎ–10ಗು, 159/5ರ 01ಎ–01ಗು,	ಪ್ರಾಧಿಕಾರದಿಂದ ನೀಡಿದ್ದ ಷರತ್ತು ಬದ್ಧ ವಿನ್ಯಾಸ ಅನುಮೋದನೆಯನ್ನು ರದ್ದುಪಡಿಸಿರುವುದಾಗಿ ಅರ್ಜಿದಾರರಿಗೆ ಮತ್ತು ಮುಖ್ಯಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ

	159/6ರ 0ಎ–09ಗು, 159/7ರ 0ಎ–16ಗು, 159/8ರ 0ಎ–21ಗು, 159/9ರ 0ಎ–15ಗು, 159/10ರ 0ಎ–10ಗು, 159/11ರ 0ಎ–04ಗು, 159/12ರ 0ಎ–18ಗು, 159/13ರ 0ಎ–29ಗು ಮತ್ತು 159/14ರ 0ಎ–08ಗು ಹಾಗೂ ಹೆಗ್ಗಡೆಗೆರೆ ಗ್ರಾಮದ ಸ.ನಂ:75/3ರ 0ಎ–29ಗು, 76/2ರಲ್ಲಿ 04ಎ–03ಗು, 77/2ರಲ್ಲಿ 03ಎ–08ಗು ಒಟ್ಟಾರೆ 29ಎ–34½ಗು ವಿಸ್ತೀರ್ಣದ ಜಮೀನಿನಲ್ಲಿ ಮೆ॥ ಬಿಡದಿ ವೆಂಡರ್ಸ್ ಇಂಡಸ್ಟ್ರೀಯಲ್ ಪಾರ್ಕ್ ವೆಲ್‌ಫೇರ್ ಅಸೋಸಿಯೇಷನ್ ರವರಿಗೆ ಷರತ್ತುಬದ್ಧ ಕೈಗಾರಿಕಾ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ.	
IX	**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು**	
1)	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:159/1ರ 0ಎ–38ಗು ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕೆ ಕೆ.ಟಿ.ಸಿ.ಪಿ (ತಿದ್ದುಪಡಿ) ಕಾಯ್ದೆ 2015 ಕಲಂ 69(4)ರಡಿಯಲ್ಲಿ ಭೂ ಉಪಯೋಗ ನಿಗಧಿಪಡಿಸಲು ಕೋರಿ ಶ್ರೀ ಸಿರಿಯಾಕ್ ಫಿಲಿಪ್ ಬಿನ್ ಲೇಟ್ ಕೆ.ಎಂ.ಫಿಲಿಪ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಖಾತಾ ರದ್ದುಪಡಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರಮ್ಮನಹಳ್ಳಿ ಗ್ರಾಮ ಪಂಚಾಯಿತಿ ರವರಿಗೆ ತಿಳಿಸಿ ಪತ್ರ ಬರೆಯಲಾಗಿದೆ.
2)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:16ರ 04ಎ–20ಗು, 17/2ರ 02ಎ–17ಗು, 86/1ಎರ 0ಎ–16ಗು, 86/1ಬಿರ 02ಎ–24ಗು, 86/2ರ 02ಎ–31ಗು, 87/1ರ 04ಎ–21ಗು ಮತ್ತು ಸರ್ವೆ ಸಂಖ್ಯೆ:87/2ರ 0ಎ–31ಗು ಒಟ್ಟು 18ಎಕರೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಎಸ್.ಎಲ್.ವಿ ರವರ ಪಾಲುದಾರರಾದ ಶ್ರೀ ಆರ್.ಕಿಶೋರ್ ಕುಮಾರ್ ಮತ್ತು ಶ್ರೀಮತಿ ಲಕ್ಷ್ಮಿ ಕೃಷ್ಣಮಣಿ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಅರ್ಜಿದಾರರಿಗೆ ಶುಲ್ಕ ಪಾವತಿಸಲು ಶುಲ್ಕ ಪಾವತಿ ನೋಟೀಸ್ ನೀಡಲಾಗಿದೆ

ತೀರ್ಮಾನ:

ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ನಿರ್ಣಯದಂತೆ ಕಛೇರಿಯಿಂದ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಲಾಯಿತು ಹಾಗೂ ಸ್ಥಿರೀಕರಿಸಲಾಯಿತು.

I ಆಡಳಿತ ಶಾಖೆ ಪ್ರಸ್ತಾವನೆಗಳು

1) ಬಿಎಂಐಸಿ ಯೋಜನಾ ಪ್ರಾಧಿಕಾರದ 2020ನೇ ಸೆಪ್ಟಂಬರ್ ಮತ್ತು ಅಕ್ಟೋಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಪರಿಶೀಲನೆ

*****

ಪ್ರಾಧಿಕಾರದ 2020ನೇ ಸೆಪ್ಟಂಬರ್ ಮತ್ತು ಅಕ್ಟೋಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಮಾಹಿತಿಯನ್ನು (ಅನುಬಂಧ–1)ರಲ್ಲಿ ಇರಿಸಿ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

ತೀರ್ಮಾನ:

2020ನೇ ಸೆಪ್ಟಂಬರ್ ಮತ್ತು ಅಕ್ಟೋಬರ್ ರವರೆಗಿನ ಪ್ರಾಧಿಕಾರದ ಮಾಸಿಕ ಆದಾಯ ಮತ್ತು ಖರ್ಚುಗಳ ವಿವರಗಳನ್ನು (ಅನುಬಂಧ–1)ರನ್ವಯ ಸಭೆಯು ಪರಿಶೀಲಿಸಿ ಅಂಗೀಕರಿಸಿತು.

2) ಬಿಎಂಐಸಿಎಪಿಎ ಯೋಜನಾ ಪ್ರಾಧಿಕಾರದ 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ. (ಅನುಬಂಧ–2).

*****

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಂಗಳೂರು ಇವರು ದಿನಾಂಕ: 19.10.2020ರಂದು ನೀಡಿರುತ್ತಾರೆ. ಸದರಿ ವರದಿಯ ಮೇಲೆ ಅನುಪಾಲನಾ ವರದಿಯನ್ನು ತಯಾರಿಸಲಾಗಿದ್ದು, ರಾಜ್ಯ ಲೆಕ್ಕ ಪತ್ರ ಇಲಾಖೆಗೆ ಸಲ್ಲಿಸುವ ಸಂಬಂಧ ವಿಷಯವನ್ನು ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದ 2019–20ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ಅನುಪಾಲನಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಪಾಲನಾ ವರದಿಯಲ್ಲಿ ನಮೂದಿಸಿರುವ ಅಂಶಗಳು ಸೂಕ್ತವಾಗಿರುತ್ತದೆ ಎಂದು ಸಭೆಯು ಅಭಿಪ್ರಾಯಿಸಿತು. ಮುಂದುವರೆದು, ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಕೈಗೊಂಡಿರುವ ಲೆಕ್ಕ ತನಿಖಾ ವರದಿಯಲ್ಲಿನ ಆಕ್ಷೇಪಣೆ/ನ್ಯೂನ್ಯತೆಗಳ ಕಂಡಿಕೆ ಸಂಖ್ಯೆ:4, 6, 10, 11, 12, 13, 14, 24, 25, 28, 35ರವರೆಗೆ ವಿವರಿಸಲಾದ ಪ್ರಾಧಿಕಾರದ ಅನುಪಾಲನಾ ವರದಿಯನ್ನು ಒಪ್ಪಿ ಅದರಂತೆ ಲೆಕ್ಕಪರಿಶೋಧನಾ ಇಲಾಖೆಗೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) ಬಿಎಂಐಸಿಎಪಿಎ ಯೋಜನಾ ಪ್ರಾಧಿಕಾರದ ವಿವಿಧ ಉಳಿತಾಯ ಖಾತೆಯಲ್ಲಿರುವ ಹಣವನ್ನು ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಬಗ್ಗೆ.

*****

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ 6 ಉಳಿತಾಯ ಖಾತೆಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಎಸ್.ಬಿಲ್ಡಿಂಗ್ ಶಾಖೆಯಲ್ಲಿ ಬ್ಯಾಂಕ್ ವ್ಯವಹಾರಗಳನ್ನು ಮಾಡಲಾಗುತ್ತಿದ್ದು, ಸದರಿ ಖಾತೆಗಳಲ್ಲಿ ಸೆಪ್ಟೆಂಬರ್–30ರವರೆಗಿನ ಮೊತ್ತಗಳ ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ಖಾತೆ ಸಂ.	ಖಾತೆ ಹೆಸರು	ಮೊತ್ತ
1	54034600702	ಸಾಮಾನ್ಯ ಖಾತೆ	2,82,38,208.74
2	64212820608	ಕೆರೆ ಸಂರಕ್ಷಣಾ ಖಾತೆ	2,16,44,888.00
3	64212820472	ಕೊಳಚೆ ನಿಮೂಲನಾ ಖಾತೆ	35,77,325.50
4	38337941831	ಉದ್ಯಾನವನ ಖಾತೆ	18,22,356.50
5	64025267109	ಅಕ್ರಮ ಸಕ್ರಮ ಖಾತೆ	2,43,058.00
6	37773876371	ಟಿ.ಡಿ.ಆರ್ ಖಾತೆ	3,737.00
		ಒಟ್ಟು:	**5,55,29,573.74**

ಪ್ರಾಧಿಕಾರದ ನಗದು ಪುಸ್ತಕದ ಪ್ರಕಾರ ದಿನಾಂಕ:30.09.2020ರ ಅಂತ್ಯಕ್ಕೆ ಪ್ರಸ್ತುತ 6 ಖಾತೆಗಳಲ್ಲಿನ ಒಟ್ಟು ಮೊತ್ತ ರೂ. 5,55,29,573.74 ಗಳಿದ್ದು, ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿ ಠೇವಣೀಕರಿಸಬಹುದಾಗಿದ್ದು, ಈ ಸಂಬಂಧ e-procurement portal ನಲ್ಲಿ ಕ್ರಮವಹಿಸಬೇಕಾಗಿರುತ್ತದೆ. ಆದರೆ ಪ್ರಾಧಿಕಾರದ ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು ಟೆಂಡರ್ ಆಹ್ವಾನಿಸುವ ಮತ್ತು ಪರಿಶೀಲಿಸುವ

ಅಧಿಕಾರಿಯಾಗಿರುತ್ತಾರೆ. ಸದರಿಯವರು ವರ್ಗಾವಣೆಗೊಂಡಿದ್ದು, ಸದರಿಯವರ ಜಾಗಕ್ಕೆ ವರ್ಗಾವಣೆಯಾಗಿ ಬಂದಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರ ಹೆಸರಿಗೆ ಡಿಜಿಟಲ್ ಕೀಯನ್ನು ಹೊಸದಾಗಿ ಪಡೆಯಬೇಕಾಗಿರುವುದರಿಂದ, e-procurementನಲ್ಲಿ ಕ್ರಮವಹಿಸಲು ಹೆಚ್ಚಿನ ಕಾಲಾವಕಾಶದ ಅವಶ್ಯಕತೆ ಇರುತ್ತದೆ.

ಹಾಗಾಗಿ ಪ್ರಾಧಿಕಾರದ ವಿವಿಧ ಉಳಿತಾಯ ಖಾತೆಯಲ್ಲಿ ಲಭ್ಯವಿರುವ ಹಣವನ್ನು ನಿಯಮಾನುಸಾರ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಇಡುವ ಬಗ್ಗೆ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ದರಪಟ್ಟಿಯನ್ನು ಪಡೆದು ಅತಿ ಹೆಚ್ಚು ಬಡ್ಡಿ ದರವನ್ನು ನೀಡುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಇಡುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು ಡಿಜಿಟಲ್ ಕೀ ಅನ್ನು ಶೀಘ್ರವಾಗಿ ಪಡೆದು ಪ್ರಾಧಿಕಾರದ ವಿವಿಧ ಉಳಿತಾಯ ಖಾತೆಯಲ್ಲಿ ಲಭ್ಯವಿರುವ ಹಣವನ್ನು ಆರ್ಥಿಕ ಇಲಾಖೆಯ ನಿರ್ದೇಶನದಂತೆ ನಿಶ್ಚಿತ ಠೇವಣಿಯನ್ನು ಮಾಡಲು (FD) ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಜರೂರಾಗಿ ನಿಯಮಾನುಸಾರ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

II <u>ತಾಂತ್ರಿಕ ಶಾಖೆ</u>

1) ಬಿಎಂಐಸಿಎ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವಸತಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಿರುವುದನ್ನು ದೃಢೀಕರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:27.05.2003ರಂದು ನಡೆದ ಪ್ರಾಧಿಕಾರದ 6ನೇ ಸಾಮಾನ್ಯ ಸಭೆ, ವಿಷಯ ಸಂಖ್ಯೆ : 6(ii) ಪ್ರಾಧಿಕಾರದಿಂದ ವಸತಿ ಕಟ್ಟಡದ ನಿರ್ಮಾಣಕ್ಕಾಗಿ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ಸದಸ್ಯ ಕಾರ್ಯದರ್ಶಿಗಳಿಗೆ ನೀಡಲು ತೀರ್ಮಾನಿಸಲಾಗಿದೆ. ಈ ರೀತಿ ನೀಡಲಾದ ಪ್ರಾರಂಭಿಕ ಪ್ರಮಾಣ ಪತ್ರಗಳ ವಿವರಗಳನ್ನು ಪ್ರಾಧಿಕಾರದ ಸಭೆಯ ಅವಗಾಹನೆಗಾಗಿ ತರಲು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ. ದಿನಾಂಕ:21.09.2020 ರಿಂದ ದಿನಾಂಕ:15.10.2020 ರವರೆಗೂ ಪ್ರಾರಂಭಿಕ ಪ್ರಮಾಣ ಪತ್ರ ನೀಡಿರುವ ವಿವರ ಈ ಕೆಳಕಂಡಂತಿರುತ್ತದೆ.

ವಸತಿ ಉದ್ದೇಶದ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಿರುವ ಪ್ರಕರಣಗಳು							
ಕ್ರ. ಸಂ	ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ	ಅರ್ಜಿದಾರರ ಹೆಸರು	ಅನುಮೋದಿತ ಬಡಾವಣೆ ವಿವರ	ನಿವೇಶನ ಸಂಖ್ಯೆ	ನಿವೇಶನದ ವಿಸ್ತೀರ್ಣ (ಚ.ಮೀ. ಗಳಲ್ಲಿ)	ಶುಲ್ಕ ಪಾವತಿಸಿರುವ ವಿವರ (ಪರಿಶೀಲನಾ ಶುಲ್ಕ ಮತ್ತು ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 18(1)ರ ಶುಲ್ಕ, ಕೆರೆ ಸಂರಕ್ಷಣಾ ಶುಲ್ಕ)	ಅನುಮೋದನೆ ನೀಡಿದ ದಿನಾಂಕ
1	2	3	4	5	6	7	8
1)	ಬಿಎಂಐಸಿಎಪಿಎ/ ಕಟ್ಟಡ-02/09/ 2020-21,	ಶ್ರೀ ಎಸ್.ಟಿ.ಶೈಲೇಂದ್ರ ಬಿನ್ ವೀರಭದ್ರಯ್ಯ	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮ	24	111.42	11,750	21.09.2020

2)	ಬಿಎಂಐಸಿಎಪಿಎ/ ಕಟ್ಟಡ–02/ 18/ 2020–21,	ಶ್ರೀ ಎಲ್.ಎ. ವೆಂಕಟೇಶ್	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬೆತ್ತಂಗೆರೆ ಗ್ರಾಮ	57	139.29	8000	12.10.2020
3)	ಬಿಎಂಐಸಿಎಪಿಎ/ ಕಟ್ಟಡ–03/ 13/2020–21,	ಶ್ರೀ ಇಫ್ತೇಖರ್ ಶೆರ್ಜಿಲ್, (ಮ್ಯಾನೇಜಿಂಗ್ ಡೈರೆಕ್ಟರ್) ಅಹದ್ ಬಿಲ್ಡರ್ಸ್ ಪ್ರೈ.ಲಿ.	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮ	256	139.29	8,700	15.10.2020
4)	ಬಿಎಂಐಸಿಎಪಿಎ/ ಕಟ್ಟಡ–03/15/ 2020–21,	ಶ್ರೀ ಇಫ್ತೇಖರ್ ಶೆರ್ಜಿಲ್, (ಮ್ಯಾನೇಜಿಂಗ್ ಡೈರೆಕ್ಟರ್) ಅಹದ್ ಬಿಲ್ಡರ್ಸ್ ಪ್ರೈ.ಲಿ.	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮ	267	139.29	8,700	15.10.2020
5)	ಬಿಎಂಐಸಿಎಪಿಎ/ ಕಟ್ಟಡ–03/14/ 2020–21,	ಶ್ರೀ ಇಫ್ತೇಖರ್ ಶೆರ್ಜಿಲ್, (ಮ್ಯಾನೇಜಿಂಗ್ ಡೈರೆಕ್ಟರ್) ಅಹದ್ ಬಿಲ್ಡರ್ಸ್ ಪ್ರೈ.ಲಿ.	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮ	257	139.29	8,700	15.10.2020
6)	ಬಿಎಂಐಸಿಎಪಿಎ/ ಕಟ್ಟಡ–03/11/ 2020–21,	ಶ್ರೀ ಇಫ್ತೇಖರ್ ಶೆರ್ಜಿಲ್, (ಮ್ಯಾನೇಜಿಂಗ್ ಡೈರೆಕ್ಟರ್) ಅಹದ್ ಬಿಲ್ಡರ್ಸ್ ಪ್ರೈ.ಲಿ.	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮ	271	139.29	8,700	15.10.2020
7)	ಬಿಎಂಐಸಿಎಪಿಎ/ ಕಟ್ಟಡ–03/12/ 2020–21,	ಶ್ರೀ ಇಫ್ತೇಖರ್ ಶೆರ್ಜಿಲ್, (ಮ್ಯಾನೇಜಿಂಗ್ ಡೈರೆಕ್ಟರ್) ಅಹದ್ ಬಿಲ್ಡರ್ಸ್ ಪ್ರೈ.ಲಿ.	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮ	266	139.29	8,700	15.10.2020
8)	ಬಿಎಂಐಸಿಎಪಿಎ/ ಕಟ್ಟಡ–03/10/ 2020–21,	ಶ್ರೀ ಇಫ್ತೇಖರ್ ಶೆರ್ಜಿಲ್, (ಮ್ಯಾನೇಜಿಂಗ್ ಡೈರೆಕ್ಟರ್) ಅಹದ್ ಬಿಲ್ಡರ್ಸ್ ಪ್ರೈ.ಲಿ.	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮ	85	111.41	7,450	15.10.2020
9)	ಬಿಎಂಐಸಿಎಪಿಎ/ ಕಟ್ಟಡ–03/16/ 2020–21,	ಶ್ರೀ ಇಫ್ತೇಖರ್ ಶೆರ್ಜಿಲ್, (ಮ್ಯಾನೇಜಿಂಗ್ ಡೈರೆಕ್ಟರ್) ಅಹದ್ ಬಿಲ್ಡರ್ಸ್ ಪ್ರೈ.ಲಿ.	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮ	324	125.50	8,650	15.10.2020

ಮೇಲ್ಕಂಡ ವಿವರಗಳನ್ನು ಸಭೆಯ ಅವಗಾಹನೆಗಾಗಿ ಸಲ್ಲಿಸಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ದಿನಾಂಕ:21.09.2020 ರಿಂದ ದಿನಾಂಕ:15.10.2020ರವರೆಗೂ ರವರೆಗೆ ಕಟ್ಟಡ ಪರವಾನಗಿ ಸಂಬಂಧ (09)ಪ್ರಕರಣಗಳಿಗೆ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ಸಭೆಯು ಸ್ಥಿರೀಕರಿಸಿತು.

III <u>ವಿನ್ಯಾಸ ಅನುಮೋದನೆ ಪ್ರಕರಣಗಳು</u>

1) ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:10 ಮತ್ತು 12ರಲ್ಲಿನ 0ಎ–38ಗು ವಿಸ್ತೀರ್ಣದ ಜಮೀನಿನಲ್ಲಿ ಅನುಮೋದನೆ ನೀಡಿರುವ ವಸತಿ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿ ಶ್ರೀ ಸಂಪತ್ ರಾಜ್ ಮತ್ತು ಶ್ರೀ ಮದನ್ ರಾಜ್ ಇವರು ಸಲ್ಲಿಸಿರುವ ಮನವಿ ಕುರಿತು.

*****

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಸಂಪತ್ ರಾಜ್ ಮತ್ತು ಶ್ರೀ ಮದನ್ ರಾಜ್ ಇವರು ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:10 ಮತ್ತು 12ರಲ್ಲಿನ 0ಎ–38ಗು ವಿಸ್ತೀರ್ಣದ ಜಮೀನಿನಲ್ಲಿ ಅನುಮೋದನೆ ನೀಡಿರುವ ವಸತಿ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಅರ್ಜಿದಾರರ ದಿನಾಂಕ:18.11.2009ರ ಮನವಿಯಂತೆ ಪ್ರಸ್ತಾವಿತ ಜಮೀನಿಗೆ ದಿನಾಂಕ:18.01.2010ರಂದು ಜರುಗಿದ ಪ್ರಾಧಿಕಾರದ 23ನೇ ಸಾಮಾನ್ಯ ಸಭೆಯ ವಿಷಯ ಸಂ.23:13ರ ತೀರ್ಮಾನದಂತೆ ವಿನ್ಯಾಸಕ್ಕೆ ಮಂಜೂರಾತಿ ಆದೇಶ ನೀಡಲಾಗಿತ್ತು. ತದನಂತರ ಅರ್ಜಿದಾರರು ದಿನಾಂಕ:21.12.2010ರ ಮನವಿಯಲ್ಲಿ ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಹಿನ್ನಲೆಯಲ್ಲಿ ಹಾಗೂ ದಿನಾಂಕ:29.03.2010ರ ಪ್ರಾಧಿಕಾರದ 24ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:24.10.4ರಲ್ಲಿ ಸದಸ್ಯ–ಕಾರ್ಯದರ್ಶಿಗಳಿಗೆ ವಿನ್ಯಾಸ ಅನುಮೋದನೆಗೆ ಅಧಿಕಾರ ನೀಡಲಾಗಿರುವುದರಿಂದ, ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ/ಮದ್ದೂರು/172/2010–11, ದಿನಾಂಕ:18.06.2011ರಲ್ಲಿ ಪರಿಷ್ಕೃತ ಮಂಜೂರಾತಿ ಆದೇಶ ನೀಡಿ, ವಿನ್ಯಾಸದಲ್ಲಿನ ಶೇ.60ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ವಿನ್ಯಾಸಕ್ಕೆ ನೀಡಿರುವ ಅನುಮೋದನೆಯು 05 ವರ್ಷಗಳು ಮೀರಿರುವುದರಿಂದ, ಸರ್ಕಾರದ ಆದೇಶ ದಿನಾಂಕ:22.11.2018 ರಲ್ಲಿ ನೀಡಿರುವ ಅವಕಾಶವನ್ನು ಉಪಯೋಗಿಸಿಕೊಂಡು ವಿನ್ಯಾಸದ ಅಭಿವೃದ್ಧಿಯನ್ನು ಪೂರ್ಣಗೊಳಿಸಿ, ವಿನ್ಯಾಸದಲ್ಲಿ ಬಿಡುಗಡೆಗೊಳ್ಳದ ಬಾಕಿ ನಿವೇಶನಗಳಿಗೆ ಪ್ರಾಧಿಕಾರದಿಂದ ಬಿಡುಗಡೆ ಪತ್ರ ಪಡೆಯಲು ದಿನಾಂಕ:31.12.2018, 13.08.2019ರಂದು ಅರ್ಜಿದಾರರಿಗೆ ತಿಳಿಸಲಾಗಿತ್ತು. ಈ ಕುರಿತು ಅರ್ಜಿದಾರರು ದಿನಾಂಕ:06.11.2019ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಬಾಕಿ ಇರುವ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ ಹಾಗೂ ಪ್ರಸ್ತಾವನೆ ಸಂಬಂಧ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

1. ಮುಖ್ಯಾಧಿಕಾರಿಗಳು, ಪುರಸಭಾ ಕಾರ್ಯಾಲಯ, ಮದ್ದೂರು ರವರ ಪತ್ರ ಸಂಖ್ಯೆ: ಪುಸಮ/ ಕಿ.ಅ/ ದೃ.ಪ/ ಸಿ.ಆರ್–46/2008–09, ದಿನಾಂಕ:27.07.2020ರಲ್ಲಿ ಖಾತಾ ವಹಿಗಳನ್ನು ಪರಿಶೀಲಿಸಿದಾಗ ಒಟ್ಟು 10ರಲ್ಲಿ 06 ನಿವೇಶನಗಳನ್ನು ಖಾತಾ ಮಾಡಿ 04 ನಿವೇಶನಗಳನ್ನು ಖಾತಾ ಮಾಡಿರುವುದಿಲ್ಲವೆಂದು ದೃಢೀಕರಿಸಿರುತ್ತಾರೆ.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಯೋಜನಾ ಉಪ ವಿಭಾಗ, ಮಂಡ್ಯ ರವರ ಪತ್ರ ಸಂಖ್ಯೆ:ಕಜಮಂ/ಸಕಾಅ–ಮಂಡ್ಯ/ ಉವಿ/ ತಾಂತ್ರಿಕ/ಸಅ/556/2014–15, ದಿನಾಂಕ:19.02.2015ರಲ್ಲಿ ಮದ್ದೂರು ಪಟ್ಟಣದಲ್ಲಿ ಶ್ರೀ ಮದನ್ ರಾಜ್ ಮತ್ತು ಶ್ರೀ ಸಂಪತ್ ರಾಜ್ ಬಿನ್ ಸುಕಂದರಾಜ್ ರವರಿಗೆ ಸೇರಿದ ಸರ್ವೆ ಸಂಖ್ಯೆ:10/12–38ಗುಂಟೆ ರಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಅಂದಾಜು ಪಟ್ಟಿಯನ್ನು ಕ.ನ.ನೀ.ಸ ಮತ್ತು ಒ.ಚ ಮಂಡಳಿಯಿಂದ ಅನುಮೋದನೆ ಪಡೆದು ಮೇಲ್ಕಂಡ ಕಾಮಗಾರಿಯನ್ನು ಮಂಡಳಿಯ ನಿರ್ದೇಶನದಂತೆ ಸಂಪೂರ್ಣಗೊಳಿಸಿರುತ್ತಾರೆ. ಸದರಿ ಕಾಮಗಾರಿಯು ತೃಪ್ತಿಕರವಾಗಿರುತ್ತದೆ ಹಾಗೂ ಯಾವುದೇ ಆಕ್ಷೇಪಣೆ ಇಲ್ಲವೆಂದು ಪ್ರಮಾಣೀಕರಿಸಲಾಗಿದೆ.

3. ಮುಖ್ಯಾಧಿಕಾರಿಗಳು, ಪುರಸಭಾ ಕಾರ್ಯಾಲಯ, ಮದ್ದೂರು ರವರ ಪತ್ರ ಸಂಖ್ಯೆ: ಪುಸಮ/ ಜಿ.ಇ/ ಸಿಆರ್02/ 2019–20, ದಿನಾಂಕ:28.11.2019ರಲ್ಲಿ ಕಿರಿಯ ಅಭಿಯಂತರರ ವರದಿಯಂತೆ ಸದರಿ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳಾದ ರಸ್ತೆ, ಮಳೆ ನೀರು ಚರಂಡಿ, ಒಳಚರಂಡಿ ಹಾಗೂ ವಿದ್ಯುತ್ ಸಂಪರ್ಕ ಕಾಮಗಾರಿಗಳನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿದ್ದು, ಎರಡನೇ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲು ಕೋರಲಾಗಿದೆ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ, ನಗರ ಉಪ ವಿಭಾಗ, ಮದ್ದೂರು ರವರ ಪತ್ರ ಸಂಖ್ಯೆ:ಸಕಾನಿಇಂ(ವಿ)/ಸಲೆಅ/ಕಾ ಮತ್ತು ಪಾ,ನಉವಿ/ಮದ್ದೂರು–1/2020–21 ದಿನಾಂಕ:13.05.2020ರಲ್ಲಿ ಮದ್ದೂರು ಟೌನ್ ಹೊಸ ಬಡಾವಣೆಯ ಸರ್ವೆ ಸಂಖ್ಯೆ:10 ಮತ್ತು 12ರಲ್ಲಿ 11ಕೆ.ವಿ ಮಾರ್ಗ, ಪರಿವರ್ತಕ ಅಳವಡಿಸಿ, ಕಾಮಗಾರಿಗಳನ್ನು ಪೂರ್ಣಗೊಳಿಸಿ ವಿದ್ಯುದ್ದೀಕರಣ ಮಾಡಿರುತ್ತಾರೆ ಎಂದು ದೃಢೀಕರಿಸಲಾಗಿದೆ.

ಅರ್ಜಿದಾರರು ಪ್ರಸ್ತಾಪಿತ ವಿನ್ಯಾಸದಲ್ಲಿನ ರಸ್ತೆ ಪ್ರದೇಶವನ್ನು ಮುಖ್ಯಾಧಿಕಾರಿಗಳು, ಮದ್ದೂರು ಪುರಸಭೆ ರವರಿಗೆ 1ನೇ ಪುಸ್ತಕದ ದಸ್ತಾವೇಜು ನಂ:MDR-1-12151-2019-20 ಸಿ.ಡಿ.ನಂ:MDRD506 ದಿನಾಂಕ:07.03.2020ರಂತೆ ನೊಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಹಸ್ತಾಂತರಿಸಿರುತ್ತಾರೆ.

ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ಪರಿಷ್ಕೃತ ವಸತಿ ವಿನ್ಯಾಸದಂತೆ ಸ್ಥಳದಲ್ಲಿ ವಿನ್ಯಾಸವನ್ನು ಅಭಿವೃದ್ಧಿಪಡಿಸಿದ್ದು, ಅರ್ಜಿದಾರರು ಅಭಿವೃದ್ಧಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಿರುವ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಸಲ್ಲಿಸಿರುವುದರಿಂದ ಹಾಗೂ ಪ್ರಸ್ತಾಪಿತ ವಿನ್ಯಾಸದಲ್ಲಿನ ರಸ್ತೆ ಪ್ರದೇಶವನ್ನು ಮುಖ್ಯಾಧಿಕಾರಿಗಳು, ಮದ್ದೂರು ಪುರಸಭೆ ರವರಿಗೆ ನೊಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಹಸ್ತಾಂತರಿಸಿರುವುದರಿಂದ, ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.40ರಷ್ಟು ನಿವೇಶನಗಳನ್ನು ನಿಯಮಾನುಸಾರ ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ನೀಡಿರುವುದರಿಂದ, ಅನುಮೋದಿತ ವಿನ್ಯಾಸದಲ್ಲಿನ ರಸ್ತೆ ಪ್ರದೇಶವನ್ನು ಸ್ಥಳೀಯ ಸಂಸ್ಥೆಯಾದ ಮದ್ದೂರು ಪುರಸಭೆಗೆ ಹಸ್ತಾಂತರಿಸಿರುವುದರಿಂದ ಹಾಗೂ ದಿನಾಂಕ:12.08.2020ರಂದು ಸ್ಥಳ ಪರಿಶೀಲಿಸಲಾಗಿ, ಸದರಿ ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಸದಸ್ಯ–ಕಾರ್ಯದರ್ಶಿಗಳು ಸಭೆಗೆ ವಿವರಿಸಿರುವುದರಿಂದ, ಪ್ರಸ್ತಾಪಿತ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ನಿಗಧಿತ 05 ವರ್ಷಗಳು ಪೂರ್ಣಗೊಂಡಿರುವುದರಿಂದ, ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 60 ಮೈಅಪ್ರಾ 2018, ದಿನಾಂಕ:22.11.2018ರಲ್ಲಿ ತಿಳಿಸಿರುವಂತೆ ಸದರಿ ಅಧಿಸೂಚನೆಯ ದಿನಾಂಕದಿಂದ 01 ವರ್ಷದ ಅವಧಿ ಮೀರಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ವೀಕೃತವಾಗುವ ಪ್ರಸ್ತಾವನೆಗಳಲ್ಲಿ ಬಿಡುಗಡೆಗೆ ಬಾಕಿ ಇರುವ ನಿವೇಶನಗಳ ಮಾರ್ಗಸೂಚಿ ಬೆಲೆಯ ಮೇಲೆ ಪ್ರತಿ ವರ್ಷಕ್ಕೆ ಶೇ.3ರಷ್ಟು ಮೊತ್ತವನ್ನು ದಂಡದ ರೂಪದಲ್ಲಿ ಪಾವತಿಸಿಕೊಂಡು, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:10 ಮತ್ತು 12ರಲ್ಲಿನ 0ಎ–38ಗು ಜಮೀನಿಗೆ ಅಂತಿಮ ಹಂತದ ಶೇ.40ರಷ್ಟು ನಿವೇಶನಗಳನ್ನು ನಿಯಮಾನುಸಾರ ಬಿಡುಗಡೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

2) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸ.ನಂ:23/1ರ 01ಎ–16½ಗು, 23/2ರ 01ಎ–07ಗು, 23/3ರ 01ಎ–06½ಗು, 24/1ರ 03ಎ–13ಗು, 24/2ರ 0ಎ–16ಗು, 24/3ರ 07ಎ–18½ಗು, 24/4ರ 11ಎ–07½ಗು, 178/1ರ 02ಎಕರೆ, 179/1ರ 01ಎಕರೆ, 179/2ರ 01ಎ–14ಗು, 179/3ರ 01ಎಕರೆ, 179/4ರ 01ಎಕರೆ, 180/1ರ 0ಎ–26ಗು, 180/2ರ 01ಎ–03ಗು, 180/3ರ 01ಎ–06ಗು, 182ರ 03ಎ–37ಗು, 183/1ರ 01ಎ–03ಗು, 183/2ರ 01ಎ–09ಗು, 183/3ರ 02ಎ–12ಗು, 184/1ರ 02ಎ–15ಗು, 184/2ರ 0ಎ–11ಗು 184/3ರ 02ಎ–12ಗು, 185ರ 04ಎ–20ಗು, 186ರ 03ಎ–31ಗು, 197/2ರ 0ಎ–32ಗು, 197/4ರ 0ಎ–33ಗು, ಮತ್ತು 197/5ರ 01ಎ–01ಗು ಒಟ್ಟು 59ಎ–30ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ಮೈಕೋ ಕಾರ್ಮಿಕರ ಬಳಗದ ವಸತಿ ಸಹಕಾರ ಸಂಘ ನಿ., ರವರು ಸಲ್ಲಿಸಿರುವ ಮನವಿ ಕುರಿತು.**

*****

ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸ.ನಂ:23/1ರ 01ಎ–16½ಗು, 23/2ರ 01ಎ–07ಗು, 23/3ರ 01ಎ–06½ಗು, 24/1ರ 03ಎ–13ಗು, 24/2ರ 0ಎ–16ಗು, 24/3ರ 07ಎ–18½ಗು, 24/4ರ 11ಎ–07½ಗು, 178/1ರ 02ಎಕರೆ, 179/1ರ 01ಎಕರೆ, 179/2ರ 01ಎ–14ಗು, 179/3ರ 01ಎಕರೆ, 179/4ರ 01ಎಕರೆ, 180/1ರ 0ಎ–26ಗು, 180/2ರ 01ಎ–03ಗು, 180/3ರ 01ಎ–06ಗು, 182ರ 03ಎ–37ಗು, 183/1ರ 01ಎ–03ಗು, 183/2ರ 01ಎ–09ಗು, 183/3ರ 02ಎ–12ಗು, 184/1ರ 02ಎ–15ಗು, 184/2ರ 0ಎ–11ಗು 184/3ರ 02ಎ–12ಗು, 185ರ 04ಎ–20ಗು, 186ರ 03ಎ–31ಗು, 197/2ರ 0ಎ–32ಗು, 197/4ರ 0ಎ–33ಗು, ಮತ್ತು 197/5ರ 01ಎ–01ಗು ಒಟ್ಟು 59ಎ–30ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ:30.05.2016ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ ವಿಷಯವನ್ನು ದಿನಾಂಕ:20.08.2016ರಂದು ಜರುಗಿದ ಪ್ರಾಧಿಕಾರದ 53ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:11ರಲ್ಲಿ ಮಂಡಿಸಲಾಗಿದ್ದು, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದಿಂದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:23.09.2016ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಅರ್ಜಿದಾರರು ದಿನಾಂಕ:23.01.2019ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಹಳ್ಳದ ಪಥ ಬದಲಾವಣೆ ಮತ್ತು ಜಮೀನಿನ ಟೋಪೋಗ್ರಾಫಿಯಂತೆ ಅನಿವಾರ್ಯವಾಗಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗಿದ್ದು, ಪರಿಷ್ಕೃತ ಸರ್ವೆ ನಕ್ಷೆಯಂತೆ ಸರ್ವೆ ಸಂಖ್ಯೆ:186ರಲ್ಲಿ ಹಾದುಹೋಗಿರುವ ಹಳ್ಳಕ್ಕೆ ಸಮಾನಾಂತರವಾಗಿ 10ಮೀ ರಸ್ತೆ ಒಳಗೊಂಡಂತೆ 25 ಮೀ. ಅಗಲದ ಬಫರ್ ಜಾಗವನ್ನು ಕಾಯ್ದಿರಿಸಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿದ್ದ ಹಿನ್ನಲೆಯಲ್ಲಿ ವಿಷಯವನ್ನು ದಿನಾಂಕ:01.02.2019ರಂದು ಜರುಗಿದ ಪ್ರಾಧಿಕಾರದ 62ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:68.12ರಲ್ಲಿ ಮಂಡಿಸಲಾಗಿದ್ದು, ಸಭೆಯ ತೀರ್ಮಾನದಂತೆ ದಿನಾಂಕ:20.04.2019ರಂದು ತಾತ್ಕಾಲಿಕ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ದಿನಾಂಕ:17.05.2019ರಂದು ಅರ್ಜಿದಾರರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ವಿನ್ಯಾಸದಲ್ಲಿನ 80% ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ತಿಳಿಸುತ್ತಾ, ಸೂಕ್ತ ಮಾರ್ಗದರ್ಶನ ನೀಡುವಂತೆ ಕೋರಿದ್ದ ಹಿನ್ನಲೆಯಲ್ಲಿ ದಿನಾಂಕ:21.05.2019ರಂದು ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಸ್ಥಳ ಪರಿಶೀಲನೆ ಸಮಯದಲ್ಲಿ ನೀಡಿರುವ ಸೂಚನೆಗಳನ್ನು ಹಾಗೂ ಪ್ರಾಧಿಕಾರದಿಂದ ನೀಡಿರುವ ತಾತ್ಕಾಲಿಕ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪಾಲಿಸಿಕೊಂಡು ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು

ಮುಕ್ತಾಯಗೊಳಿಸಿ, ಪ್ರಾಧಿಕಾರಕ್ಕೆ ಮಾಹಿತಿ ಒದಗಿಸುವಂತೆ ದಿನಾಂಕ:31.05.2019ರ ಕಛೇರಿ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ನಂತರ, ಅರ್ಜಿದಾರರು ದಿನಾಂಕ:31.08.2019 ಮತ್ತು 10.12.2019ರಂದು ಮನವಿಗಳನ್ನು ಸಲ್ಲಿಸಿ, ವಿನ್ಯಾಸದಲ್ಲಿನ ಶೇ.100 ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಹಾಗೂ ಎಲ್ಲಾ ಪ್ರಾಧಿಕಾರಗಳ ನಿರಾಕ್ಷೇಪಣಾ ಪತ್ರಗಳನ್ನು ಈಗಾಗಲೇ ಸಲ್ಲಿಸಿರುವುದರಿಂದ, ನಿವೇಶನಗಳನ್ನು ನೊಂದಾಯಿಸಲು ಬಿಡುಗಡೆ ಮಾಡುವಂತೆ ಕೋರಿದ್ದ ಹಿನ್ನಲೆಯಲ್ಲಿ ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಸ್ಥಳ ಪರಿಶೀಲನೆ ಸಮಯದಲ್ಲಿ ನೀಡಿರುವ ಸೂಚನೆಗಳನ್ನು ಹಾಗೂ ಪ್ರಾಧಿಕಾರದಿಂದ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪಾಲಿಸಿಕೊಂಡು ವಿನ್ಯಾಸದಲ್ಲಿನ ಉಳಿಕೆ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಳಿಸಿ, ಪ್ರಾಧಿಕಾರಕ್ಕೆ ಮಾಹಿತಿ ನೀಡಿದ್ದಲ್ಲಿ ಪರಿಶೀಲಿಸಿ ಪ್ರಸ್ತಾವನೆ ಸಂಬಂಧ ಮುಂದಿನ ಕ್ರಮವಹಿಸಲಾಗುವುದು ಎಂದು ಕ್ರಮವಾಗಿ ದಿನಾಂಕ:31.10.2019 ಮತ್ತು 17.01.2020ರ ಕಛೇರಿ ಪತ್ರಗಳಲ್ಲಿ ಮತ್ತೊಮ್ಮೆ ಅರ್ಜಿದಾರರಿಗೆ ತಿಳಿಸಲಾಗಿರುತ್ತದೆ.

ತದನಂತರ, ದಿನಾಂಕ:03.03.2020 ರಂದು ಅರ್ಜಿದಾರರು ಪ್ರಾಧಿಕಾರಕ್ಕೆ ಮತ್ತೊಮ್ಮೆ ಮನವಿ ಸಲ್ಲಿಸಿ, ವಿನ್ಯಾಸದಲ್ಲಿನ ಎಸ್.ಟಿ.ಪಿ, ಬ್ರಿಡ್ಜ್, ರಸ್ತೆ, ಸಿಎ, ಉದ್ಯಾನವನ ಮತ್ತು ಇನ್ನಿತರೆ ಕಾಮಗಾರಿಗಳನ್ನು ಒಳಗೊಂಡಂತೆ ಎಲ್ಲಾ ಕಾಮಗಾರಿಗಳು ಸಹ ಪೂರ್ಣಗೊಂಡಿರುವುದಾಗಿ ಹಾಗೂ ಕೆಲವು ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುವುದಾಗಿ ತಿಳಿಸುತ್ತಾ, ಪ್ರಾಧಿಕಾರದಿಂದ ಮತ್ತೊಮ್ಮೆ ಸ್ಥಳ ಪರಿಶೀಲಿಸಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಅದರಂತೆ, ದಿನಾಂಕ:19.03.2020ರಂದು ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಸ್ಥಳದಲ್ಲಿ ಕೆಲವೊಂದು ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶಗಳಲ್ಲಿನ ವಿಸ್ತೀರ್ಣಗಳು ಮತ್ತು ಅಳತೆಗಳು ಪರಿಷ್ಕೃತ ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಇಲ್ಲದೇ ಇರುವುದು ಹಾಗೂ ಪ್ರಶ್ನಿತ ಜಮೀನಿಗೆ ಸಂಪರ್ಕ ಕಲ್ಪಿಸುವ ಹಾಲಿ 10ಮೀ ರಸ್ತೆಯ ವಿಸ್ತರಣೆಗಾಗಿ ಕಾಯ್ದಿರಿಸಿರುವ ಜಾಗವನ್ನು ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಯಥಾವತ್ತಾಗಿ ಅಳವಡಿಸದೇ ಇರುವುದು ಕಂಡುಬಂದಿದ್ದ ಹಿನ್ನಲೆಯಲ್ಲಿ, ಪ್ರಾಧಿಕಾರದ ಸ್ಥಳ ಪರಿಶೀಲನೆ ಸಮಯದಲ್ಲಿ ಕಂಡುಬಂದಿರುವ ಸದರಿ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿ, ಸ್ಥಳ ಪರಿಶೀಲನೆ ಸಮಯದಲ್ಲಿ ನೀಡಿರುವ ಸೂಚನೆಗಳನ್ನು ಹಾಗೂ ಪ್ರಾಧಿಕಾರದಿಂದ ನೀಡಿರುವ ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪಾಲಿಸಿಕೊಂಡು ವಿನ್ಯಾಸವನ್ನು ಸ್ಥಳದಲ್ಲಿ ಅಭಿವೃದ್ದಿಪಡಿಸಿ ವಿನ್ಯಾಸದಲ್ಲಿನ ಉಳಿಕೆ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಳಿಸಿ, As Built Plan ನೊಂದಿಗೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ ನಂತರವಷ್ಟೇ ಪರಿಶೀಲಿಸಿ ಪ್ರಸ್ತಾವನೆ ಕುರಿತು ಮುಂದಿನ ಕ್ರಮವಹಿಸಲಾಗುವುದು ಎಂದು ದಿನಾಂಕ:06.05.2020ರ ಕಛೇರಿ ಪತ್ರದಲ್ಲಿ ತಿಳಿಸಲಾಗಿತ್ತು.

ಅದಕ್ಕನುಗುಣವಾಗಿ ಅರ್ಜಿದಾರರು ದಿನಾಂಕ:14.10.2020ರ ತಮ್ಮ ಮನವಿಯಲ್ಲಿ ಸರ್ವೆ ಸಂಖ್ಯೆ:197/2, 180/1 ಮತ್ತು 180/3ರ ಜಮೀನುಗಳಲ್ಲಿ ಬಡಾವಣೆಯ ಆಜು-ಬಾಜಿನ ರೈತರಿಂದ ಸ್ವಲ್ಪ ಪ್ರಮಾಣದ ಜಾಗ ಒತ್ತುವರಿಯಾಗಿರುವ ಕಾರಣ, ಸದರಿ ಪ್ರದೇಶವನ್ನು ಹೊರತುಪಡಿಸಿ, ಪ್ರಾಧಿಕಾರದಿಂದ ಸ್ಥಳ ಪರಿಶೀಲನೆ ಸಮಯದಲ್ಲಿ ನೀಡಿರುವ ಸೂಚನೆಗಳನ್ನು ಹಾಗೂ ಪ್ರಾಧಿಕಾರದಿಂದ ನೀಡಿರುವ ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪಾಲಿಸಿಕೊಂಡು ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಶೇ.100ರಷ್ಟು ಕಾಮಗಾರಿಗಳನ್ನು ಮುಕ್ತಾಯಗೊಳಿಸಿ, ವಿನ್ಯಾಸವನ್ನು ಅಭಿವೃದ್ಧಿಪಡಿಸಿರುವುದಾಗಿ ಹಾಗೂ ಸದರಿ ಸರ್ವೆ ಸಂಖ್ಯೆ:197/2, 180/1 ಮತ್ತು 180/3ರ ಜಮೀನುಗಳಲ್ಲಿ ಆಗಿರುವ ವ್ಯತ್ಯಾಸವು ಮುಂದಿನ ದಿನಗಳಲ್ಲಿ ಕ್ರಮಬದ್ಧವಾದರೂ ಸಹ ಯಾವುದೇ ರೀತಿಯ ಪರಿಷ್ಕರಣೆಗೆ ಅರ್ಜಿ ಸಲ್ಲಿಸುವುದಿಲ್ಲವೆಂದು ತಿಳಿಸುತ್ತಾ, ತಮ್ಮ ಮನವಿಯೊಂದಿಗೆ ಲಗತ್ತಿಸಿರುವ As Built Plan ನಂತೆ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ, ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:16.10.2020ರಂದು ವಿನ್ಯಾಸದ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯ ನಿವೇಶನದ ಜಾಗಗಳನ್ನು ಅಭಿವೃದ್ಧಿಪಡಿಸಿದ್ದು, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶಕ್ಕೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಿರುತ್ತಾರೆ.

ಪ್ರಸ್ತಾವನೆ ಸಂಬಂಧ ವಿನ್ಯಾಸದಲ್ಲಿನ ಕಾಮಗಾರಿಗಳ ಬಗ್ಗೆ ಈ ಕೆಳಕಂಡ ಇಲಾಖೆಗಳಿಂದ ಪ್ರಮಾಣ ಪತ್ರ ನೀಡಲಾಗಿರುತ್ತದೆ.

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ. ಉಪ–ವಿಭಾಗ, ರಾಮನಗರ ರವರು ಪತ್ರ ಸಂಖ್ಯೆ:ಸಕಾಇ/ ಗ್ರಾ.ಕು.ನೀ&ನೈ.ಉ.ವಿ/ ರಾಮ/ 2019–20/ 88–89, ದಿನಾಂಕ:30.08.2019ರಲ್ಲಿ ಸದರಿ ಬಡಾವಣೆಯಲ್ಲಿನ ಒಳಚರಂಡಿ (ಯು.ಜಿ.ಡಿ) ವ್ಯವಸ್ಥೆ, OHT ಮತ್ತು ನೀರು ಒದಗಿಸುವ ಪೈಪ್‌ಲೈನ್ ಒಳಗೊಂಡಂತೆ ನೀರು ಸರಬರಾಜು ವ್ಯವಸ್ಥೆ ಪೂರ್ಣಗೊಂಡಿರುವುದು ಕಂಡುಬಂದಿರುತ್ತದೆ ಮತ್ತು ಜನ ವಸತಿಗೆ ಯೋಗ್ಯವಾಗಿರುವುದು ಕಂಡುಬಂದಿರುತ್ತದೆ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ಉಪ ವಿಭಾಗ, ರಾಮನಗರ ರವರು ಪತ್ರ ಸಂಖ್ಯೆ: ಸಕಾಅ/ ಪಂ.ರಾ.ಇಂ.ಉ.ವಿ/ರಾಮ/2019–20/214–15, ದಿನಾಂಕ:30.08.2019ರಲ್ಲಿ ಅನುಮೋದಿತ ನಕ್ಷೆಯಂತೆ ರಸ್ತೆ ನಿರ್ಮಾಣ ಮತ್ತು ಜೆಲ್ಲಿ ಬಡಾವಣೆಯ ಕಾಮಗಾರಿಗಳು, ರಸ್ತೆ ಸಿ.ಸಿ ನಿರ್ಮಾಣ ಕಾಮಗಾರಿಗಳು, ರಸ್ತೆಯ ಪಕ್ಕದಲ್ಲಿ ಡ್ರೈನೇಜ್ ಕಾಮಗಾರಿಗಳು, ಕಲ್ವರ್ಟ್ ಕಾಮಗಾರಿಗಳು ಮತ್ತು ರಸ್ತೆ ಡಾಂಬರೀಕರಣ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಂಡಿರುವುದಾಗಿ ತಿಳಿಸಿರುತ್ತಾರೆ.
3. Environmental Officer, KSPCB, Ramanagar ರವರ ಪತ್ರ ಸಂಖ್ಯೆ: PCB 1098 RMN/ 2019-20/1073, ದಿನಾಂಕ:28.02.2020ರಲ್ಲಿ ವಿನ್ಯಾಸದಲ್ಲಿ 180KLD ಮತ್ತು 300 KLD ಸಾಮರ್ಥ್ಯದ Sewage treatment Plant (STP) ಗಳು ಮಂಡಳಿಯಿಂದ ನೀಡಿರುವ CFE ಯಂತೆ ಪೂರ್ಣಗೊಂಡಿರುವುದಾಗಿ ಹಾಗೂ ಈ ಸಂಬಂಧ ಮಂಡಳಿಯಿಂದ ಯಾವುದೇ ಅಭ್ಯಂತರವಿರುವುದಿಲ್ಲವೆಂದು ತಿಳಿಸುತ್ತಾ, STP ಯು ಪೂರ್ಣಗೊಂಡಿರುವ ಬಗ್ಗೆ ಮುಕ್ತಾಯ ವರದಿ ನೀಡಿದ್ದು, ಸದರಿ ಪತ್ರದಲ್ಲಿ Consent for Operation ಪಡೆಯಲು ಅರ್ಜಿದಾರರು ತದನಂತರ ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿದೆ. ಆದರೆ, ಪ್ರಾಧಿಕಾರದಿಂದ ನೀಡಿರುವ ತಾತ್ಕಾಲಿಕ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶದಲ್ಲಿನ ಷರತ್ತು ಸಂಖ್ಯೆ:10(f) ರಲ್ಲಿ "ಸದರಿ ತಾತ್ಕಾಲಿಕ ಪರಿಷ್ಕೃತ ಅನುಮೋದಿತ ವಿನ್ಯಾಸದಲ್ಲಿ Sewage treatment Plant (STP) ನ ಕಾಮಗಾರಿಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ಉಸ್ತುವಾರಿಯಲ್ಲಿ ತೃಪ್ತಿಕರವಾಗಿ ಕಾರ್ಯಗತಗೊಳಿಸಿ Consent for Operation ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು" ಎಂಬ ಷರತ್ತನ್ನು ವಿಧಿಸಲಾಗಿರುತ್ತದೆ.
4. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯತ್), ರಾಮನಗರ ರವರು ಪತ್ರ ಸಂಖ್ಯೆ: ಹಿಸತೋನಿ/ ಜಿಪಂ/ ರಾ/ ತಾ.ಸ/ 2019–20/ 466, ದಿನಾಂಕ:13.02.2020ರಲ್ಲಿ ಅನುಮೋದಿತ ನಕ್ಷೆಯ ವಿನ್ಯಾಸದಂತೆ ಉದ್ಯಾನವನ ಜಾಗದಲ್ಲಿ ಮತ್ತು ರಸ್ತೆ ಬದಿಯಲ್ಲಿ ವಿವಿಧ ರೀತಿಯ ಗಿಡಗಳನ್ನು ನಾಟಿ ಮಾಡಿರುತ್ತಾರೆ ಎಂದು ದೃಢೀಕರಿಸಿರುತ್ತಾರೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ರವರು ಪತ್ರ ಸಂಖ್ಯೆ: ಬ.ಗ್ರಾ/ ಪಂ:36/2020–21, ದಿನಾಂಕ:29.06.2020ರಲ್ಲಿ ಪ್ರಾಧಿಕಾರದಿಂದ ಅನುಮೋದಿಸಿರುವ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯಂತೆ ವಿನ್ಯಾಸದ ಅಭಿವೃದ್ಧಿದಾರರು ಪಂಚಾಯಿತಿಯ ಮಾರ್ಗದರ್ಶನಾನುಸಾರ ಸರ್ಕಾರದ ಎಲ್ಲಾ ನಿಯಮಗಳನ್ನು ಪಾಲಿಸಿರುವುದರಿಂದ ಹಾಗೂ ಪ್ರಾಧಿಕಾರದಿಂದ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪಾಲಿಸಿಕೊಂಡು ಪ್ರಾಧಿಕಾರದಿಂದ ಸೂಚಿಸಿರುವಂತೆ ಬಡಾವಣೆಯ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದರಿಂದ ನಿವೇಶನದಾರರುಗಳಿಗೆ ವಿನ್ಯಾಸದಲ್ಲಿ ಮೂಲಭೂತ ಸೌಕರ್ಯಗಳಾದ ನೀರು

ಸರಬರಾಜು ರಸ್ತೆ, ರಸ್ತೆ ಬದಿ ಚರಂಡಿ, ವಿದ್ಯುಚ್ಛಕ್ತಿ, ಒಳಚರಂಡಿ ವ್ಯವಸ್ಥೆ (Sewage disposal unit) ಒಳಗೊಂಡಂತೆ ಉದ್ಯಾನವನಗಳನ್ನು ತೃಪ್ತಿಕರವಾಗಿ ಮುಕ್ತಾಯಗೊಳಿಸಿ ಬಡಾವಣೆಯ ಅಭಿವೃದ್ಧಿಪಡಿಸಿರುವುದರಿಂದ, ಪೂರ್ಣ ಪ್ರಮಾಣದ ನಿವೇಶನಗಳನ್ನು ಪ್ರಾಧಿಕಾರದಿಂದ ಬಿಡುಗಡೆ ಮಾಡಲು ಪಂಚಾಯಿತಿ ವತಿಯಿಂದ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ದೃಢೀಕರಿಸಿರುತ್ತಾರೆ.

6. Assistant Executive Engineer (Ele), BESCOM, Bidadi Sub-Division ರವರು ಪತ್ರಗಳ ಸಂಖ್ಯೆ: AEE/Bidadi/AE(T)/2020-21/410, ದಿನಾಂಕ:16.06.2020ರಲ್ಲಿ ವಿನ್ಯಾಸದಲ್ಲಿ LT water Supply installation ಮತ್ತು LT Street Light installation Service ಆಗಿರುವ ಬಗ್ಗೆ ಹಾಗೂ ವಿನ್ಯಾಸದಲ್ಲಿನ Distribution Transformer, HT & LT Overhead lines commission ಮತ್ತು Service ಆಗಿರುವ ಬಗ್ಗೆ Service Certificate ಗಳನ್ನು ನೀಡಿರುತ್ತಾರೆ.

ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಮೇಲ್ಕಂಡಂತೆ ಸಂಬಂಧಪಟ್ಟ ಇಲಾಖೆಗಳಿಂದ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರಗಳನ್ನು ಪಡೆದು ಸಲ್ಲಿಸಿರುವುದರಿಂದ ವಸತಿ ವಿನ್ಯಾಸವನ್ನು ಪ್ರಸ್ತುತ ನೆಲದ ಮೇಲೆ ಅಭಿವೃದ್ಧಿಪಡಿಸಿರುವಂತೆ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು, ನಿಯಮಾನುಸಾರ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ಸೂಕ್ತ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ನೀಡಿರುವ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆಯ ನಿಬಂಧನೆಗಳಂತೆ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಹಾಗೂ ಈ ಸಂಬಂಧ ಸಂಬಂಧಪಟ್ಟ ಇಲಾಖೆಗಳಿಂದ ಮುಕ್ತಾಯ ಪ್ರಮಾಣ ಪತ್ರ/ ದೃಢೀಕರಣ ಪತ್ರಗಳನ್ನು ನೀಡಿರುವ ಅಂಶವನ್ನು ಒಳಗೊಂಡಂತೆ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯಲ್ಲಿನ ಒಟ್ಟು ವಿಸ್ತೀರ್ಣದಲ್ಲಿ ಒತ್ತುವರಿಯಾಗಿರುವ ಅಂಶವನ್ನು ಸಹ ಸದಸ್ಯ-ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಹಾಗಾಗಿ, ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆಯ ಒಟ್ಟು ವಿಸ್ತೀರ್ಣದಲ್ಲಿ ಒತ್ತುವರಿಯಾಗಿರುವ 0ಎ-18¼ಗು ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ 59ಎ-11¾ಗು ವಿಸ್ತೀರ್ಣಕ್ಕೆ ನೆಲದ ಮೇಲೆ ಅಭಿವೃದ್ಧಿಪಡಿಸಿರುವಂತೆ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಡಿಸಿ, ಸದರಿ ಮಾರ್ಪಡಿತ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಮಾರ್ಪಾಡಿತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ (ಶೇ.100ರಷ್ಟು) ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 153/1ರ 02ಎ-30ಗು, 154/1ರ 01ಎಕರೆ, 154/2ರ 02ಎ-34ಗು, 156/1ರ 0ಎ-38ಗು ಮತ್ತು ಸರ್ವೆ ಸಂಖ್ಯೆ:156/2ರ 04ಎಕರೆ ಒಟ್ಟು 11ಎ-22ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀ ದಿಲೀಪ್.ಬಿ.ಸಾಲಿಯಾನ್ ಇವರು ಸಲ್ಲಿಸಿರುವ ಮನವಿ ಕುರಿತು.

******

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 153/1ರ 02ಎ-30ಗು, 154/1ರ 01ಎಕರೆ, 154/2ರ 02ಎ-34ಗು, 156/1ರ 0ಎ-38ಗು ಮತ್ತು ಸರ್ವೆ ಸಂಖ್ಯೆ:156/2ರ 04ಎಕರೆ ಒಟ್ಟು 11ಎ-22ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ದಿಲೀಪ್.ಬಿ.ಸಾಲಿಯಾನ್ ಇವರು ದಿನಾಂಕ:22.06.2016ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ ವಿಷಯವನ್ನು ದಿನಾಂಕ:06.12.2016ರಂದು ಜರುಗಿದ

ಪ್ರಾಧಿಕಾರದ 54ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:2ರಲ್ಲಿ ಮಂಡಿಸಲಾಗಿ, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:13.03.2017ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಅರ್ಜಿದಾರರು ದಿನಾಂಕ:11.03.2019ರಂದು ಮನವಿ ಸಲ್ಲಿಸಿ, ಪ್ರಸ್ತಾಪಿತ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಲಾಗಿದೆ.

ಅರ್ಜಿದಾರರು ದಿನಾಂಕ:09.09.2020ರಂದು ಮನವಿ ಸಲ್ಲಿಸಿ, ಮನವಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

1. ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಮೈಸೂರು ರವರ ಪತ್ರ ಸಂಖ್ಯೆ: ಹಿಸತೋನಿ/ಜಿಪಂ/ಮೈ/ತಾಸ1/10/2019–20, ದಿನಾಂಕ:27.01.2020ರಲ್ಲಿ ಉದ್ಯಾನವನ–1 3043.15ಚ.ಮೀ, ಉದ್ಯಾನವನ–2, 508.04ಚ.ಮೀ ಹಾಗೂ ಉದ್ಯಾನವನ–3 1136.03ಚ.ಮೀ ಉದ್ಯಾನವನದ ಕಾಮಗಾರಿಗಳು ತೃಪ್ತಿಕರವಾಗಿದ್ದು, ಉದ್ಯಾನವನವು ಅಭಿವೃದ್ಧಿ ಹೊಂದಿದೆ ಎಂದು ನಿರಾಕ್ಷೇಪಣೆ ಪತ್ರ ನೀಡಿರುತ್ತಾರೆ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನ.ರಾ.ಮೊಹಲ್ಲಾ, ಚಾ.ವಿ.ಸ.ನಿ.ನಿ, ಮೈಸೂರು ರವರ ಪತ್ರ ಸಂಖ್ಯೆ:ಸಕಾಇಂ(ವಿ)/ನರಾಮೊ/19–20/5230, ದಿನಾಂಕ:27.02.2020ರಲ್ಲಿ ಸದರಿ ವಸತಿ ಬಡಾವಣೆಯ ವಿದ್ಯುತ್ ಕಾಮಗಾರಿಯನ್ನು ಸ್ವಂತ ಕಾಮಗಾರಿ ಯೋಜನೆಯಡಿ ನಿರ್ಮಿಸಿದ್ದು, ವಿದ್ಯುತ್ ಮಾರ್ಗ ರಚನೆ ಹಾಗೂ ಇತರೆ ಕಾಮಗಾರಿಗಳು ಪೂರ್ಣಗೊಂಡಿದ್ದು, ದಿನಾಂಕ:20.01.2020ರಂದು ಬಡಾವಣೆಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ ಎಂದು ದೃಢೀಕರಣ ಪತ್ರ ನೀಡಲಾಗಿದೆ.
3. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ರವರ ಪತ್ರ ಸಂಖ್ಯೆ: ಸಿ.ಗ್ರಾ.ಪಂ.ನಂ.99/2019–20, ದಿನಾಂಕ:29.08.2019ರಲ್ಲಿ ಸದರಿ ಬಡಾವಣೆಯಲ್ಲಿ ಅನುಮೋದಿತ ನಕ್ಷೆಯಂತೆ ನಿವೇಶನಗಳನ್ನು ನಿರ್ಮಿಸಲಾಗಿದೆ ಹಾಗೂ ರಸ್ತೆಗಳಿಗೆ ಡಾಂಬರೀಕರಣ, ಮಳೆ ನೀರಿನ ಚರಂಡಿ, ಉದ್ಯಾನವನ, ವಿದ್ಯುತ್ ಸಂಪರ್ಕ, ಒಳಚರಂಡಿ, ನೀರು ಸರಬರಾಜು ವ್ಯವಸ್ಥೆ (ಪೈಪ್ ಲೈನ್ ಒಳಗೊಂಡಂತೆ) ಹಾಗೂ ಸೆಪ್ಟಿಕ್ ಟ್ಯಾಂಕ್ ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ಸದರಿ ಜಮೀನಿನ ಅಂತಿಮ ವಸತಿ ನಕ್ಷೆಗೆ ಅನುಮೋದನೆ ನೀಡಲು ಗ್ರಾಮ ಪಂಚಾಯಿತಿಯಿಮದ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂದು ತಿಳಿಸಲಾಗಿರುತ್ತದೆ.
4. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಮೈಸೂರು ರವರ ಪತ್ರ ಸಂಖ್ಯೆ: ಸಕಾಇಂ/ಪಂ.ರಾ.ಇಂ./ಉವಿಮೈ/640/2019–20, ದಿನಾಂಕ:04.09.2019ರ ಪತ್ರದಲ್ಲಿ ರಸ್ತೆ ಡಾಂಬರೀಕರಣ ಮತ್ತು ಚರಂಡಿ ಕಾಮಗಾರಿ ಪೂರ್ಣಗೊಂಡಿರುವುದಾಗಿ ದೃಢೀಕರಿಸಿರುತ್ತಾರೆ.
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ &ನೈ ಉಪ–ವಿಭಾಗ, ಮೈಸೂರು ರವರ ಪತ್ರ ಸಂಖ್ಯೆ: ಸಕಾಇಂ:ಗ್ರಾಕುನೀ&ನೈ/ಉವಿ/ಮೈ/ಜ.ಬಡಾವಣೆ /2019–20/272, ದಿನಾಂಕ:05.09.2019ರ ಪತ್ರದಲ್ಲಿ ಸದರಿ ಬಡಾವಣೆಯನ್ನು ಪರಿಶೀಲನೆ ಮಾಡಲಾಗಿ, ಹೊಸದಾಗಿ ನಿರ್ಮಿಸಿರುವ ಬಡಾವಣೆಯಲ್ಲಿ ನೀರು ಸರಬರಾಜು ವ್ಯವಸ್ಥೆಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ಒಳಚರಂಡಿ ಪೈಪ್‌ಲೈನ್, ಸೆಪ್ಟಿಕ್ ಟ್ಯಾಂಕ್ ಮತ್ತು ಒಳಚರಂಡಿ ಸಂಸ್ಕರಣಾ ಘಟಕ ಕಾಮಗಾರಿ ಪೂರ್ಣಗೊಳಿಸಿರುತ್ತಾರೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ.
6. ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ, RO-1, ಮೈಸೂರು (ನಗರ) ರವರ ಪತ್ರ ಸಂಖ್ಯೆ:KSPCB/RO-1/MYS-URB/EO/DEO/AEO/2019-20/435, ದಿನಾಂಕ:07.06.2019ರಲ್ಲಿ "The Layout was inspected on 04.06.2019 and observed that the project proponent/you have constructed STP of 108KLD capacity with sequential batch reactor technology to treat sewage and sullage and the same is considered. In this

context and letter submitted by you cited under ref(2), it is hereby advised to approach the concerned Authorities for further course of action. Also you are hereby advised to obtain consent for operation from the board before commisioning of Layout" ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯ, ನಿವೇಶನದ ಜಾಗಗಳನ್ನು ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿಪಡಿಸಿದ್ದು, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶಕ್ಕೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಿರುತ್ತಾರೆ.

ಅದರಂತೆ, ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಈ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರ ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ನಿಯಮಾನುಸಾರ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ನೀಡಿರುವುದರಿಂದ ಹಾಗೂ ದಿನಾಂಕ:23.09.2020ರಂದು ಸ್ಥಳ ಪರಿಶೀಲಿಸಲಾಗಿ, ಸದರಿ ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಸದಸ್ಯ-ಕಾರ್ಯದರ್ಶಿಗಳು ಸಭೆಗೆ ವಿವರಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನಗಳಿಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳೀಯ ಸಂಸ್ಥೆಗೆ ಮತ್ತು ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2015 ಕಲಂ 17(2-ಬಿ) ರಂತೆ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

IV ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳು

1) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/1ರ 03ಎ-14ಗು (0ಎ-09ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ: 5/4ರ 0ಎ-39ಗು (0ಎ-01ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/5ರ 03ಎ-01ಗು (0ಎ-02ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/6ರ 01ಎ-8¾ಗು, ಸರ್ವೆ ಸಂಖ್ಯೆ:5/7ರ 01ಎ-18¾ಗು (0ಎ-10ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:7/2ರ 0ಎ-30ಗು ಮತ್ತು ಸರ್ವೆ ಸಂಖ್ಯೆ:7/3ರ 0ಎ-32ಗು (0ಎ-02ಗು 'ಎ' ಖರಾಬು ಸೇರಿ) ಒಟ್ಟು 11ಎ-23½ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ವೆಂಕಟರಮಣಪ್ಪ ಬಿನ್ ಲೇಟ್ ವೆಂಕಟಪ್ಪ, ಶ್ರೀಮತಿ ಲಕ್ಷ್ಮೀದೇವಿ ಕೋಂ ಲೇಟ್ ಸಂಜೀವಯ್ಯ, ಶ್ರೀ ಸಿದ್ದಪ್ಪ ಬಿನ್ ಲೇಟ್ ವೆಂಕಟಪ್ಪ, ಶ್ರೀ ಲೋಕೇಶಯ್ಯ ಬಿನ್ ಲೇಟ್ ವೆಂಕಟಪ್ಪ, ಶ್ರೀ ಲಕ್ಷ್ಮಣ ಬಿನ್ ಲೇಟ್ ನಾರಾಯಣಪ್ಪ ಮತ್ತು ಶ್ರೀ ಗೋವಿಂದಪ್ಪ.ಎನ್ ಬಿನ್ ಲೇಟ್ ನಾರಾಯಣಪ್ಪ ಇವರು ಸಲ್ಲಿಸಿರುವ ಮನವಿ ಕುರಿತು.

******

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/1ರ 03ಎ-14ಗು (0ಎ-09ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ: 5/4ರ 0ಎ-39ಗು (0ಎ-01ಗು 'ಎ' ಖರಾಬು

ಸೇರಿ), ಸರ್ವೆ ಸಂಖ್ಯೆ:5/5ರ 03ಎ–01ಗು (0ಎ–02ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/6ರ 01ಎ–8¾ಗು, ಸರ್ವೆ ಸಂಖ್ಯೆ:5/7ರ 01ಎ–18¾ಗು (0ಎ–10ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:7/2ರ 0ಎ–30ಗು ಮತ್ತು ಸರ್ವೆ ಸಂಖ್ಯೆ:7/3ರ 0ಎ–32ಗು (0ಎ–02ಗು 'ಎ' ಖರಾಬು ಸೇರಿ) ಒಟ್ಟು 11ಎ–23½ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.**

ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ ಹಾಗೂ ಸುತ್ತಮುತ್ತಲೂ ವಸತಿ ಬೆಳವಣಿಗೆಗಳು ಇರುವುದು ಕಂಡುಬಂದಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ) ರವರ ಪತ್ರ ಸಂಖ್ಯೆ:ಬಿಎಂಐಸಿಪಿ/ಎಲ್ಎಕ್ಯೂ/(1)/ಸಿಆರ್/71/2020–21, ದಿನಾಂಕ:16.10.2020 ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/1, 5/4, 5/5, 5/6, 5/7 ಮತ್ತು 7/3ರ ಜಮೀನುಗಳಿಗೆ ಈ ತಹಲ್ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಬೆಂಗಳೂರು/ ವಿಭೂಸ್ವಾಅ–2/ 2376/ 2020–21, ದಿನಾಂಕ:17.10.2020ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/1ರ 03ಎ–14ಗು (0ಎ–09ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ: 5/4ರ 0ಎ–39ಗು (0ಎ–01ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/5ರ 03ಎ–01ಗು (0ಎ–02ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/6ರ 01ಎ–8¾ಗು, ಸರ್ವೆ ಸಂಖ್ಯೆ:5/7ರ 01ಎ–18¾ಗು (0ಎ–10ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:7/2ರ 0ಎ–30ಗು ಮತ್ತು ಸರ್ವೆ ಸಂಖ್ಯೆ:7/3ರ 0ಎ–32ಗು (0ಎ–02ಗು 'ಎ' ಖರಾಬು ಸೇರಿ) ಒಟ್ಟು 11ಎ–23½ಗು ವಿಸ್ತೀರ್ಣದ ಜಮೀನುಗಳು ಈ ಕಛೇರಿಯ ವತಿಯಿಂದ ಭೂಸ್ವಾಧೀನವಾಗಿರುವುದು ಕಂಡುಬರುವುದಿಲ್ಲ ಎಂದು ಮತ್ತು ಬೇರೆ ಇಲಾಖೆ/ ವಲಯ ಕಛೇರಿಯಿಂದ ಭೂಸ್ವಾಧೀನವಾಗಿದ್ದಲ್ಲಿ, ಆಯಾ ಇಲಾಖೆಗಳಿಂದ ಹಿಂಬರಹ ಪಡೆಯಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 29.08.2020ರಂದು "ವಿಜಯ ಕರ್ನಾಟಕ" ಮತ್ತು "ಡೆಕ್ಕನ್ ಹೆರಾಲ್ಡ್" ದಿನ ಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಆಹ್ವಾನಿಸಿ, ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ದಿನಾಂಕ:04.09.2020ರಂದು ಶ್ರೀಮತಿ ಸರಸ್ವತಮ್ಮ, ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀಮತಿ ಶೋಭಾ.ಎಂ ರವರು ನಿಗಧಿತ ಅವಧಿಯಲ್ಲಿ ಆಕ್ಷೇಪಣೆಯನ್ನು ಸಲ್ಲಿಸಿ, ಆಕ್ಷೇಪಣೆದಾರರು, ಶ್ರೀ ವೆಂಕಟರಮಣಪ್ಪ ರವರ ಲೀಗಲ್ ಹೇರ್‌ಗಳಾಗಿದ್ದು, ಸದರಿ ಜಮೀನಿನಲ್ಲಿ ಅವರಿಗೆ ನಿಗಧಿತ ಪಾಲುದಾರಿಕೆ ಇರುವುದಾಗಿ ತಿಳಿಸಿ, ಈ ಸಂಬಂಧ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ O.S.No:30/1997ರಂತೆ ಪ್ರಕರಣ ದಾಖಲಿಸಿದ್ದು, ದಿನಾಂಕ:05.09.2011ರಂದು ಸದರಿ ಪ್ರಕರಣದಲ್ಲಿ ಆದೇಶವಾಗಿರುತ್ತದೆ. ದಿನಾಂಕ:05.09.2011ರ ಮಾನ್ಯ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಶ್ರೀ ಸಂಜೀವಯ್ಯ ಮತ್ತು ಇತರರು R.A.No:22/2012 ರಂತೆ ಪ್ರಕರಣ ದಾಖಲಿಸಿ ಈ ಪ್ರಕರಣದಲ್ಲಿ ದಿನಾಂಕ:21.12.2019ರಂದು

ಮಾನ್ಯ ನ್ಯಾಯಾಲಯವು ಆದೇಶ ಹೊರಡಿಸಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ಪ್ರಾಧಿಕಾರಕ್ಕೆ ಭೂ ಉಪಯೋಗ ಬದಲಾವಣೆ ಸಂಬಂಧ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಯಾವುದೇ Exclusive Right ಇರುವುದಿಲ್ಲ ಎಂದು ತಿಳಿಸಿ, ಮಾನ್ಯ ನ್ಯಾಯಾಲಯದ ಆದೇಶದ ಪ್ರತಿಗಳನ್ನು ಹಾಗೂ ವಿಭಾಗ ಪತ್ರಗಳ ಪ್ರತಿಯನ್ನು ಲಗತ್ತಿಸಿ ಪ್ರಸ್ತಾವನೆಯನ್ನು ತಡೆಹಿಡಿಯಲು ಕೋರಿರುತ್ತಾರೆ.

ಸದರಿ ಆಕ್ಷೇಪಣೆಯ ಕುರಿತು ಸಮಜಾಯಿಷಿ ನೀಡುವಂತೆ ಅರ್ಜಿದಾರರಿಗೆ ತಿಳಿಸಿ ಪ್ರಾಧಿಕಾರದಿಂದ ದಿನಾಂಕ:21.09.2020ರಂದು ಪತ್ರ ಬರೆಯಲಾಗಿದೆ.

ಅರ್ಜಿದಾರರು ದಿನಾಂಕ:15.10.2020ರಂದು ಮನವಿ ಸಲ್ಲಿಸಿ, ಪ್ರಸ್ತಾವನೆ ಸಂಬಂಧ ಕೋರಿರುವ ಜಮೀನುಗಳ ಪೈಕಿ ಬಿ.ಎಂ.ಕಾವಲ್ ಗ್ರಾಮದ ಸ.ಸಂ.5/4ರ 39ಗು ಹಾಗೂ ಸ.ಸಂ.5/1ರ 3ಎ–14ಗು ಒಟ್ಟು 04ಎ–13ಗು ಜಮೀನನ್ನು ಪ್ರಸ್ತಾವನೆಯಿಂದ ಕೈಬಿಟ್ಟು ಉಳಿಕೆ ಒಟ್ಟು 07ಎ–10½ಗು ಜಮೀನುಗಳಿಗೆ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡಲು ಕೋರಿರುತ್ತಾರೆ.

ಹಾಗಾಗಿ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇದ್ದು, ಸುತ್ತಮುತ್ತಲೂ ವಸತಿ ಬೆಳವಣಿಗೆಗಳು ಇರುವುದು ಕಂಡುಬಂದಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಲು ಅವಕಾಶವಿರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ತಾಳೆ ಹೊಂದುತ್ತಿರುವುದರಿಂದ ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಛೇರಿಗಳಿಂದ ಮಾಹಿತಿಯನ್ನು ನೀಡಿರುವುದರಿಂದ ಮತ್ತು ಪ್ರಸ್ತಾವಿತ ಜಮೀನಿಗೆ ಸಂಬಂಧಿಸಿದಂತೆ ಕೆಟಿಸಿಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆ ಕರೆಯಲಾಗಿದ್ದು, ನಿಗಧಿತ ಅವಧಿಯಲ್ಲಿ ಒಂದು ಆಕ್ಷೇಪಣೆ ಸ್ವೀಕೃತವಾಗಿದ್ದು, ಸದರಿ ಆಕ್ಷೇಪಣೆಗೆ ಅರ್ಜಿದಾರರು ಸರ್ವೆ ಸಂಖ್ಯೆ:5/4 ಮತ್ತು 5/1ರ 03ಎ–14ಗು ಜಮೀನುಗಳನ್ನು ಹೊರತುಪಡಿಸಿ ಪ್ರಸ್ತಾವನೆ ಪರಿಗಣಿಸಲು ಕೋರಿರುವುದರಿಂದ, ಈ ಹಿನ್ನಲೆಯಲ್ಲಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/5ರ 03ಎ–01ಗು (0ಎ–02ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/6ರ 01ಎ–8¾ಗು, ಸರ್ವೆ ಸಂಖ್ಯೆ:5/7ರ 01ಎ–18¾ಗು (0ಎ–10ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:7/2ರ 0ಎ–30ಗು ಮತ್ತು ಸರ್ವೆ ಸಂಖ್ಯೆ: 7/3ರ 0ಎ–32ಗು (0ಎ–02ಗು 'ಎ' ಖರಾಬು ಸೇರಿ) ಒಟ್ಟು 07ಎ–10½ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/1ರ 03ಎ–14ಗು (0ಎ–09ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ: 5/4ರ 0ಎ–39ಗು (0ಎ–01ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/5ರ 03ಎ–01ಗು (0ಎ–02ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/6ರ 01ಎ–8¾ಗು, ಸರ್ವೆ ಸಂಖ್ಯೆ:5/7ರ 01ಎ–18¾ಗು (0ಎ–10ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:7/2ರ 0ಎ–30ಗು ಮತ್ತು ಸರ್ವೆ ಸಂಖ್ಯೆ:7/3ರ 0ಎ–32ಗು (0ಎ–02ಗು 'ಎ' ಖರಾಬು ಸೇರಿ) ಒಟ್ಟು 11ಎ–23½ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ

ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇದ್ದು, ಸುತ್ತಮುತ್ತಲೂ ವಸತಿ ಬೆಳವಣಿಗೆಗಳು ಇರುವುದು ಕಂಡುಬಂದಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲಿ 01 ಆಕ್ಷೇಪಣೆ ಸ್ವೀಕೃತಗೊಂಡಿದ್ದು, ಸದರಿ ಆಕ್ಷೇಪಣೆ ಸಂಬಂಧ ಅರ್ಜಿದಾರರು ಸರ್ವೆ ಸಂಖ್ಯೆ:5/1ರ 03ಎ-14ಗು (0ಎ-09ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ: 5/4ರ 0ಎ-39ಗು (0ಎ-01ಗು 'ಎ' ಖರಾಬು ಸೇರಿ) ಒಟ್ಟು 04ಎ-13ಗು ಜಮೀನುಗಳನ್ನು ಹೊರತುಪಡಿಸಿ ಪ್ರಸ್ತಾವನೆ ಪರಿಗಣಿಸಲು ಕೋರಿರುವುದರಿಂದ, ಸದರಿ ಆಕ್ಷೇಪಣೆಯಲ್ಲಿ ಪ್ರಸ್ತಾಪಿಸಿರುವ ಸರ್ವೆ ಸಂಖ್ಯೆ ಜಮೀನನ್ನು ಹೊರತುಪಡಿಸಿ ಸಭೆಯು ತೀರ್ಮಾನಿಸಿ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಭೂ ಪರಿವರ್ತನೆ ಸಂದರ್ಭದಲ್ಲಿ ಪ್ರಸ್ತಾಪಿತ ಜಮೀನುಗಳಲ್ಲಿ ಇರುವ 'ಎ' ಖರಾಬು ಪ್ರದೇಶವನ್ನು ಕಂದಾಯ ಇಲಾಖೆಯಿಂದ ಮಂಜೂರು ಮಾಡಿಸಿಕೊಳ್ಳುವ ಷರತ್ತಿಗೊಳಪಡಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/5ರ 03ಎ-01ಗು (0ಎ-02ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/6ರ 01ಎ-8¾ಗು, ಸರ್ವೆ ಸಂಖ್ಯೆ:5/7ರ 01ಎ-18¾ಗು (0ಎ-10ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:7/2ರ 0ಎ-30ಗು ಮತ್ತು ಸರ್ವೆ ಸಂಖ್ಯೆ: 7/3ರ 0ಎ-32ಗು (0ಎ-02ಗು 'ಎ' ಖರಾಬು ಸೇರಿ) ಒಟ್ಟು 07ಎ-10½ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರ 08ಎ-10ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಹೆಚ್.ಬಿ.ಸಿದ್ದಗಂಗಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.

******

ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರ 08ಎ-10ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.** ಸರ್ಕಾರದ ಆದೇಶ ಸಂಖ್ಯೆ:ನಅಇ 11 ಬಿಎಂಆರ್ 2017, ಬೆಂಗಳೂರು ದಿನಾಂಕ:20.07.2019ರಂತೆ ಪ್ರಸ್ತಾಪಿತ ಜಮೀನು ಟಿ.ಜಿ.ಆರ್ ವಲಯ-1 ರಲ್ಲಿ ಬರುತ್ತಿದ್ದು, ವಸತಿ ಅಭಿವೃದ್ಧಿಗಳಿಗೆ ಯಾವುದೇ ನಿರ್ಭಂದನೆ ವಿಧಿಸಲಾಗಿರುವುದಿಲ್ಲ.

ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ಮಾಗಡಿ ರಸ್ತೆಯಿಂದ ಮಾದನಾಯಕನಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಿಂದ ಉಪಗಮನ ಹೊಂದುವ 10ಮೀ ಅಗಲದ ರಸ್ತೆ ಸಂಪರ್ಕವಿರುತ್ತದೆ ಮತ್ತು ಸದರಿ ಜಮೀನಿನಲ್ಲಿ ತಾತ್ಕಾಲಿಕ ಷೆಡ್‌ಗಳು ಇರುತ್ತದೆ. ಈ ಕುರಿತು ಅರ್ಜಿದಾರರು ಪ್ರಮಾಣ ಪತ್ರ ಸಲ್ಲಿಸಿ, ಪ್ರಸ್ತಾಪಿತ ಜಮೀನು ವ್ಯವಸಾಯ ವಲಯದಲ್ಲಿದ್ದು, ಕೃಷಿ ಭೂಮಿಯಾಗಿದ್ದಂತಹ ಸಂದರ್ಭದಲ್ಲಿ ಅಂದರೆ 15 ವರ್ಷಗಳ ಹಿಂದೆಯೇ ಹಸು ಸಾಕಾಣೆಗಾಗಿ ಹಾಗೂ ಅವುಗಳನ್ನು ನೋಡಿ ಕೊಳ್ಳುತ್ತಿದ್ದ ಕೆಲಸಗಾರರು ಉಳಿದುಕೊಳ್ಳಲು ತಾತ್ಕಾಲಿಕ ಷೆಡ್‌ಗಳನ್ನು ನಿರ್ಮಿಸಿದ್ದು, ಪ್ರಸ್ತುತ ಜಮೀನಿನ ಸುತ್ತಮುತ್ತ ಸಾಕಷ್ಟು ವಸತಿ ಬಡಾವಣೆಗಳು ವಾಸಕ್ಕೆ

ಯೋಗ್ಯವಾದ ಮನೆಗಳು ನಿರ್ಮಾಣಗೊಂಡಿದ್ದು, ನಮ್ಮ ಜಮೀನಿನ ಸುತ್ತ ಬೆಳವಣಿಗೆ ಆಗಿರುತ್ತದೆ. ಆದ್ದರಿಂದ, ಸದರಿ ಜಮೀನು ವಾಸಕ್ಕೆ ಯೋಗ್ಯವಾದ ಬಡಾವಣೆ ನಿರ್ಮಿಸಲು ಸೂಕ್ತವಾಗಿರುತ್ತದೆ. ಅಲ್ಲದೆ ಈ ಜಮೀನಿನ ಭೂ ಉಪಯೋಗ ಬದಲಾವಣೆಯ ನಂತರ (ವಸತಿ ವಲಯಕ್ಕೆ) ಭೂ ಪರಿವರ್ತನೆ ಮಾಡುವುದರ ಒಳಗಾಗಿ ಜಮೀನಿನಲ್ಲಿರುವ ತಾತ್ಕಾಲಿಕ ಷೆಡ್‌ಗಳನ್ನು ತೆರವುಗೊಳಿಸಲು ಬದ್ದನಾಗಿರುವುದಾಗಿ ತಿಳಿಸಿ. ಮೇಲ್ಕಂಡ ಜಮೀನಿನಲ್ಲಿ ಯಾವುದೇ ಕೈಗಾರಿಕಾ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ ಮತ್ತು ಸದರಿ ಜಮೀನಿಗೆ ಗ್ರಾಮ ಪಂಚಾಯಿತಿಯ ರಸ್ತೆಯು ಇರುತ್ತದೆ ಎಂಬುದಾಗಿ ಪ್ರಮಾಣೀಕರಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಾಚೋಹಳ್ಳಿ ಗ್ರಾಮ ಪಂಚಾಯಿತಿ ರವರು ದಿನಾಂಕ:20.08.2020ರ ಪತ್ರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾಚೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರ 08ಎ–10ಗು ಜಮೀನಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ನಿರಾಪೇಕ್ಷಣಾ ಪತ್ರ ನೀಡಿರುತ್ತಾರೆ ಹಾಗೂ ಸದರಿ ಜಮೀನಿಗೆ ಹೊಂದಿಕೊಂಡಂತೆ 10ಮೀಟರ್ ಅಗಲದ ಸಾರ್ವಜನಿಕ ರಸ್ತೆಯು ಹಾದು ಹೋಗಿದ್ದು, ಸದರಿ ರಸ್ತೆಯನ್ನು ಈಗಾಗಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಹಾಯೋಜನೆಯಲ್ಲಿ ಅಳವಡಿಸಲಾಗಿದೆ. ಸದರಿ ರಸ್ತೆಯು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಹಾಗೂ ಸದರಿ ರಸ್ತೆಯು ಮಾಗಡಿ ರಸ್ತೆಯಿಂದ ಮಾದನಾಯಕನಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗೆ ಕೂಡಿಕೊಂಡಿರುತ್ತದೆ ಎಂದು ಅರ್ಜಿದಾರರು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ರಸ್ತೆಯನ್ನು ಭೂ ಮಾಪಕರು ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಲ್ಲಿಯೂ ಸಹ ನಮೂದಿಸಲಾಗಿದೆ.

ವಿಶೇಷ ಜಿಲ್ಲಾಧಿಕಾರಿ, ಕೆಐಎಡಿಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ ಎಕ್ಯೂ/ ಸಿಆರ್/18/2020–21 ದಿನಾಂಕ:11.09.2020ರಲ್ಲಿ, ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ(ಬಿಎಂಐಸಿಪಿ)ರವರ ಪತ್ರ ಸಂಖ್ಯೆ: ಕೆಐಎಡಿಬಿ/ಬಿಎಂಐಸಿಪಿ/ಎಲ್‌ಎಕ್ಯೂ(2)/ಸಿಆರ್/40/2020–21, ದಿನಾಂಕ:11.09.2020 ಪತ್ರದಲ್ಲಿ ತಿಳಿಸಿರುವಂತೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ 196 ಎಸ್‌ಪಿಕ್ಯೂ 98, ದಿನಾಂಕ:02.06.1999ರಂತೆ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರ 08ಎ–10ಗು ವಿಸ್ತೀರ್ಣದ ಜಮೀನನ್ನು ಈ ತಹಲ್‌ವರೆವಿಗೂ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಬೆಂಗಳೂರು/ ವಿಭೂಸ್ವಾಅ–2/ 1643/ 2020–21, ದಿನಾಂಕ:09.09.2020ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರಲ್ಲಿ 08ಎ–10ಗು ವಿಸ್ತೀರ್ಣದ ಜಮೀನು ಈ ಕಛೇರಿಯ ವತಿಯಿಂದ ಭೂಸ್ವಾಧೀನವಾಗಿರುವುದು ಕಂಡುಬರುವುದಿಲ್ಲ ಮತ್ತು ಬೇರೆ ಇಲಾಖೆ/ ವಲಯ ಕಛೇರಿಯಿಂದ ಭೂಸ್ವಾಧೀನವಾಗಿದ್ದಲ್ಲಿ ಆಯಾ ಇಲಾಖೆಗಳಿಂದ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 03.09.2020ರಂದು "ಉದಯವಾಣಿ" ಮತ್ತು "ದಿ ಹಿಂದೂ" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಆಹ್ವಾನಿಸಿ, ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಹಾಗಾಗಿ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರಂತೆ ಪ್ರಶ್ನಿತ ಜಮೀನಿಗೆ 10ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕವಿದ್ದು ಹಾಗೂ ಜಮೀನಿನ ಸುತ್ತಮುತ್ತಲೂ ಅಭಿವೃದ್ಧಿಗಳು ಬಂದಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಲು ಅವಕಾಶವಿರುತ್ತದೆ. ಆದ್ದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ತಾಳೆ ಹೊಂದುತ್ತಿರುವುದರಿಂದ ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಛೇರಿಗಳಿಂದ ಮಾಹಿತಿಯನ್ನು ನೀಡಿರುವುದರಿಂದ ಮತ್ತು ಪ್ರಸ್ತಾವಿತ ಜಮೀನಿಗೆ ಸಂಬಂಧಿಸಿದಂತೆ ಕೆಟಿಸಿಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆ ಕರೆಯಲಾಗಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರ 08ಎ–10ಗು *ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಸ್ತಾಪಿತ ಜಮೀನಿಗೆ 10.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕವಿದ್ದು ಹಾಗೂ ಜಮೀನಿನ ಸುತ್ತಮುತ್ತಲೂ ಅಭಿವೃದ್ಧಿಗಳು ಬಂದಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ ಪ್ರಸ್ತಾಪಿತ ಜಮೀನಿನಲ್ಲಿ ಹಾಲಿ ಇರುವ ತಾತ್ಕಾಲಿಕ ಶೆಡ್‌ಗಳನ್ನು ತೆರವುಗೊಳಿಸಿ ಪ್ರಾಧಿಕಾರಕ್ಕೆ ಅರ್ಜಿದಾರರು ಛಾಯಾ ಚಿತ್ರದೊಂದಿಗೆ ವರದಿ ಮಾಡಿದ ನಂತರ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಅರ್ಜಿದಾರರು ಕೋರಿರುವ* ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರ 08ಎ–10ಗು *ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.*

3) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 281/2ರ 01ಎ–36ಗು (0ಎ–16ಗು 'ಎ' ಖರಾಬು ಪ್ರದೇಶವನ್ನು ಒಳಗೊಂಡಂತೆ) ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಭೈರಪ್ಪ.ಆರ್ ಬಿನ್ ರಂಗಪ್ಪ ಇವರು ಸಲ್ಲಿಸಿರುವ ಮನವಿ ಕುರಿತು.

******

ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 281/2ರ 01ಎ–36ಗು (0ಎ–16ಗು 'ಎ' ಖರಾಬು ಪ್ರದೇಶವನ್ನು ಒಳಗೊಂಡಂತೆ) ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.**

ಪ್ರಾಧಿಕಾರದಿಂದ ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿನಿಂದ 200–250ಮೀ ದೂರದಲ್ಲಿ ನಾರಾಯಣಪುರ ಗ್ರಾಮದ ವಸತಿ ಬೆಳವಣಿಗೆಗಳು ಮತ್ತು ಸುಮಾರು 400ಮೀ–450ಮೀ ದೂರದಲ್ಲಿ ಕೊಡಿಯಾಲಕರೇನಹಳ್ಳಿ ಗ್ರಾಮದ ವಸತಿ ಬೆಳವಣಿಗೆಗಳು ಕಂಡುಬಂದಿರುತ್ತವೆ ಹಾಗೂ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಿಂದ ಕೊಡಿಯಾಲಕರೇನಹಳ್ಳಿ ಗ್ರಾಮದ ಕಡೆಗೆ ಹೋಗುವ ರಸ್ತೆಯಿಂದ ನಾರಾಯಣಪುರ ಮತ್ತು ತಿಟ್ಟನಹಳ್ಳಿ ಗ್ರಾಮದ ಕಡೆ ಹೋಗುವ ಕಾಂಕ್ರೀಟ್ ರಸ್ತೆ ಇದ್ದು, ಸದರಿ ಕಾಂಕ್ರೀಟ್ ರಸ್ತೆಯಿಂದ ಉಪಗಮನ ಹೊಂದುವ ಸುಮಾರು 10ಮೀ ಅಗಲದ ರಸ್ತೆಯಿಂದ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕವಿದ್ದು, ಸದರಿ ರಸ್ತೆಯನ್ನು ಗ್ರಾಮ ನಕ್ಷೆಯಲ್ಲೂ ಸಹ ತೋರಿಸಲಾಗಿದೆ.

ಅರ್ಜಿದಾರರು ದಿನಾಂಕ:04.06.2020ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಮನವಿಯೊಂದಿಗೆ ಪ್ರಸ್ತಾಪಿತ ಜಮೀನಿನಲ್ಲಿ 01ಎ–20ಗು ಪ್ರದೇಶವನ್ನು ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುವುದಾಗಿ, ಆದರೆ ಸದರಿ ಸರ್ವೆ ಸಂಖ್ಯೆಯಲ್ಲಿ 0ಎ–16ಗು 'ಎ' ಖರಾಬು ಪ್ರದೇಶ ಇದ್ದು, ತದನಂತರ ಭೂ ಪರಿವರ್ತನೆಗೊಳಪಡಿಸುವ ಸಂದರ್ಭದಲ್ಲಿ ಸದರಿ ಖರಾಬು ಪ್ರದೇಶಕ್ಕೆ ತಗಲುವ ವೆಚ್ಚವನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪಾವತಿಸಿ ಸಂಬಂಧಪಟ್ಟ ಸಮಿತಿಯಲ್ಲಿ ಮಂಜೂರು ಮಾಡಿಸಿಕೊಳ್ಳಲು ಬದ್ದರಿರುವುದಾಗಿ ತಿಳಿಸುತ್ತಾ, ಆದ್ದರಿಂದ ಸರ್ವೆ ಸಂಖ್ಯೆ:281/1ರಲ್ಲಿನ 01ಎ–20ಗು ಮತ್ತು 0ಎ–16ಗು 'ಎ' ಖರಾಬು ಪ್ರದೇಶವನ್ನು ಒಳಗೊಂಡಂತೆ ಒಟ್ಟು 01ಎ–36ಗು ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಕೋರಿ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನು ಮೈಸೂರು ಮುಖ್ಯ ರಸ್ತೆಯಿಂದ ಕನಕಪುರ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ನಾರಾಯಣಪುರ ರಸ್ತೆಯಿಂದ 33ಅಡಿ ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿರುತ್ತದೆ ಎಂದು ಮತ್ತು ಸದರಿ ರಸ್ತೆಯು ಗ್ರಾಮ ಪಂಚಾಯಿತಿಗೆ ಒಳಪಟ್ಟಿರುತ್ತದೆ ಎಂದು ತಿಳಿಸುತ್ತಾ, ಸದರಿ ಜಮೀನಿಗೆ ಸಂಬಂಧಿಸಿದ ಮೂಲ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಭೈರಮಂಗಲ ಗ್ರಾಮ ಪಂಚಾಯಿತಿ ರವರು ದಿನಾಂಕ:04.06.2020ರಂದು ದೃಢೀಕರಣ ಪತ್ರ ನೀಡಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ ಎಕ್ಯೂ(2)/ಸಿ.ಆರ್:/45/2020–21 ದಿನಾಂಕ:03.07.2020ರಲ್ಲಿ, "ಕೊಡಿಯಾಲಕರೇನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್ ಜಮೀನುಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ/196/ಎಸ್‌ಪಿಕ್ಯೂ/1998, ದಿನಾಂಕ:19.12.1998 ಹಾಗೂ 29.01.2003ರಲ್ಲಿ ಕೆಐಎಡಿ ಕಾಯ್ದೆ ಕಲಂ 28(1)ರ ಪ್ರಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ, ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ/ 654/ ಎಸ್‌ಪಿಕ್ಯೂ/ 2008 ದಿನಾಂಕ:21.03.2009ರಲ್ಲಿ ಕೆಐಎಡಿ ಕಾಯ್ದೆ ಕಲಂ 28(4)ರ ಪ್ರಕಾರ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ಅರ್ಜಿದಾರರು ಕೋರಿರುವ ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ನಂಬರ್ 281/2ರಲ್ಲಿ 01ಎ–36ಗು (0ಎ–16ಗು ಎ ಖರಾಬು ಸೇರಿ) ವಿಸ್ತೀರ್ಣದ ಜಮೀನು ಮೇಲ್ಕಂಡ ಅಧಿಸೂಚನೆಗಳಲ್ಲಿ ಸೇರಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ–1, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/386/2020–21, ದಿನಾಂಕ:13.07.2020ರಲ್ಲಿ "ರಾಮನಗರ ಜಿಲ್ಲೆ/ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:281/2ರಲ್ಲಿನ 01ಎ–36ಗು ಜಮೀನು ಈ ಕಛೇರಿಯಿಂದ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 05.09.2020ರಂದು "ವಿಜಯವಾಣಿ" ಮತ್ತು "ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಆಹ್ವಾನಿಸಿ, ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಹಾಗಾಗಿ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರಂತೆ ಪ್ರಶ್ನಿತ ಜಮೀನಿಗೆ 10ಮೀ ಅಗಲದ ರಸ್ತೆ ಸಂಪರ್ಕವಿದ್ದು, ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಭೈರಮಂಗಲ ಗ್ರಾಮ ಪಂಚಾಯಿತಿ ರವರು ದೃಢೀಕರಣ ಪತ್ರ ನೀಡಿರುವುದರಿಂದ ಹಾಗೂ ಜಮೀನಿನಿಂದ 200–250ಮೀ ಅಂತರದಲ್ಲಿ ನಾರಾಯಣಪುರ ಗ್ರಾಮದ ವಸತಿ ಬೆಳವಣಿಗೆಗಳು ಮತ್ತು ಸುಮಾರು 400ಮೀ–450ಮೀ ಅಂತರದಲ್ಲಿ ಕೊಡಿಯಾಲಕರೇನಹಳ್ಳಿ ಗ್ರಾಮದ ವಸತಿ ಬೆಳವಣಿಗೆಗಳು ಕಂಡುಬಂದಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಲು ಅವಕಾಶವಿರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ತಾಳೆ ಹೊಂದುತ್ತಿರುವುದರಿಂದ ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಛೇರಿಗಳಿಂದ ಮಾಹಿತಿಯನ್ನು ನೀಡಿರುವುದರಿಂದ ಮತ್ತು ಪ್ರಸ್ತಾವಿತ ಜಮೀನಿಗೆ ಸಂಬಂಧಿಸಿದಂತೆ ಕೆಟಿಸಿಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಲಾಗಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 281/2ರ 01ಎ–36ಗು (0ಎ–16ಗು 'ಎ' ಖರಾಬು ಪ್ರದೇಶವನ್ನು ಒಳಗೊಂಡಂತೆ) ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 281/2ರ 01ಎ–36ಗು (0ಎ–16ಗು 'ಎ' ಖರಾಬು ಪ್ರದೇಶವನ್ನು ಒಳಗೊಂಡಂತೆ) ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಶ್ನಿತ ಜಮೀನಿಗೆ 10ಮೀ ಅಗಲದ ರಸ್ತೆ ಸಂಪರ್ಕವಿದ್ದು, ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಭೈರಮಂಗಲ ಗ್ರಾಮ ಪಂಚಾಯಿತಿ ರವರು ದೃಢೀಕರಣ ಪತ್ರ ನೀಡಿರುವುದರಿಂದ ಹಾಗೂ ಜಮೀನಿನಿಂದ 200–250ಮೀ ಅಂತರದಲ್ಲಿ ನಾರಾಯಣಪುರ ಗ್ರಾಮದ ವಸತಿ ಬೆಳವಣಿಗೆಗಳು ಮತ್ತು ಸುಮಾರು 400ಮೀ–450ಮೀ ಅಂತರದಲ್ಲಿ ಕೊಡಿಯಾಲಕರೇನಹಳ್ಳಿ ಗ್ರಾಮದ ವಸತಿ ಬೆಳವಣಿಗೆಗಳು ಕಂಡುಬಂದಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ

ನಿಗಧಿಪಡಿಸಲು ನಿರ್ಧರಿಸಿ, ಭೂ ಪರಿವರ್ತನೆ ಸಂದರ್ಭದಲ್ಲಿ 0ಎ–16ಗು 'ಎ' ಖರಾಬು ಪ್ರದೇಶವನ್ನು ಕಂದಾಯ ಇಲಾಖೆಯಿಂದ ಮಂಜೂರು ಮಾಡಿಸಿಕೊಳ್ಳುವ ಷರತ್ತಿಗೊಳಪಡಿಸಿ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 281/2ರ 01ಎ–36ಗು (0ಎ–16ಗು 'ಎ' ಖರಾಬು ಪ್ರದೇಶವನ್ನು ಒಳಗೊಂಡಂತೆ) ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 24/1ರ 01ಎ–17¼ಗು, 24/2ರ 01ಎ–17¼ಗು, 24/3ರ 01ಎ–17¼ಗು, 24/4ರ 0ಎ–19ಗು, 24/5ರ 0ಎ–30ಗು ಮತ್ತು ಸರ್ವೆ ಸಂಖ್ಯೆ:24/6ರ 0ಎ–38¼ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ವಿಮಲ್ ಜೈನ್ ಕಟಾರಿಯ, ಮೆ॥ ಭೈಯ್ಯ ಟೆಕ್ಸ್‌ಟೈಲ್ಸ್ ಪೈಲಿ ಪ್ರತಿನಿಧಿಯಾದ ಡೈರೆಕ್ಟರ್ ಶ್ರೀ ಗೌರವ್ ಭೈಯ್ಯ ಮತ್ತು ಶ್ರೀ ಮುತ್ತಪ್ಪ ಇವರು ಸಲ್ಲಿಸಿರುವ ಮನವಿ ಕುರಿತು.**

******

ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 24/1ರ 01ಎ–17¼ಗು, 24/2ರ 01ಎ–17¼ಗು, 24/3ರ 01ಎ–17¼ಗು, 24/4ರ 0ಎ–19ಗು, 24/5ರ 0ಎ–30ಗು ಮತ್ತು ಸರ್ವೆ ಸಂಖ್ಯೆ:24/6ರ 0ಎ–38¼ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರುಗಳು ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ಸದರಿ ಜಮೀನುಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವುದಾಗಿ ದಿನಾಂಕ:02.09.2020ರಂದು ಪ್ರಮಾಣೀಕರಿಸಿರುವ ಜಂಟಿ ಅಭಿವೃದ್ಧಿ ಕರಾರು ಪತ್ರ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ರಸ್ತೆ ಪರಿಚಲನಾ ನಕ್ಷೆಯಂತೆ ಪ್ರಸ್ತಾಪಿತ ಜಮೀನಿನಲ್ಲಿ 24.38ಮೀ (80 ಅಡಿ) ಅಗಲದ ರಸ್ತೆಯನ್ನು ಪ್ರಸ್ತಾಪಿಸಲಾಗಿದೆ ಹಾಗೂ** ಪ್ರಸ್ತಾಪಿತ ಜಮೀನು ಬೆಂಗಳೂರು–ಮೈಸೂರು ರೈಲ್ವೆ ಗಡಿಗೆ ಹೊಂದಿಕೊಂಡಿರುವುದನ್ನು ಸಹ ಗಮನಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್‌ಎಕ್ಯೂ(2)/ಸಿ.ಆರ್:/214/2017–18, ದಿನಾಂಕ:23/28.02.2018ರಲ್ಲಿ "ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/1ರ 01ಎ–17¼ಗು, 24/2ರ 01ಎ–17¼ಗು, 24/3ರ 01ಎ–17¼ಗು, 24/4ರ 01ಎ–17¼ಗು, 24/5ರ 0ಎ–30ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನುಗಳಿಗೆ ಈ ತಹಲ್‌ವರೆವಿಗೂ ಭೂಸ್ವಾಧೀನದ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ 1506/2017–18, ದಿನಾಂಕ:27.02.2018ರಲ್ಲಿ "ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/1ರ 01ಎ–17¼ಗು, 24/2ರ 01ಎ–17¼ಗು, 24/3ರ 01ಎ–17¼ಗು, 24/4ರ 01ಎ–17¼ಗು, 24/5ರ 0ಎ–30ಗು ಒಟ್ಟು 06ಎ–19ಗು ಜಮೀನುಗಳು ಕೆ.ಐ.ಎ.ಡಿ.ಬಿ ಯಿಂದ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ " ಎಂದು ತಿಳಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ರವರ ಪತ್ರ ಸಂಖ್ಯೆ:ಮಂ.ಗ್ರಾ.ಪಂ/200/19–20, ದಿನಾಂಕ:10.02.2020ರಲ್ಲಿ ಪ್ರಸ್ತಾಪಿತ ಜಮೀನಿಗೆ ಮೂಲಸೌಕರ್ಯಗಳನ್ನು

ಒದಗಿಸುವ ಸಂಬಂಧ ಕೆಲವು ನಿಬಂಧನೆಗಳಿಗೊಳಪಟ್ಟು ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ ಮತ್ತು ಪತ್ರ ಸಂಖ್ಯೆ: ಮಂ.ಗ್ರಾ.ಪಂ/ /19–20, ದಿನಾಂಕ:11.06.2020ರಲ್ಲಿ ಪ್ರಸ್ತಾಪಿತ ಜಮೀನಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಿಂದ ವಂಡರ್–ಲಾ ಕಡೆಗೆ ಹೋಗುವ ಸಾರ್ವಜನಿಕ ರಸ್ತೆ ಸಂಪರ್ಕವಿದ್ದು, ಸದರಿ ರಸ್ತೆಯು 13.8ಮೀ–14.0ಮೀ ಅಗಲವಿರುವುದಾಗಿ ತಿಳಿಸುತ್ತಾ, ಸದರಿ ರಸ್ತೆಯನ್ನು ಪಂಚಾಯಿತಿಯಿಂದ ಅಭಿವೃದ್ಧಿಪಡಿಸಿದೆ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ತಹಶೀಲ್ದಾರ್, ರಾಮನಗರ ತಾಲ್ಲೂಕು, ರಾಮನಗರ ರವರ ದೃಢೀಕೃತ ಸರ್ವೆ ನಕ್ಷೆ ಸಂಖ್ಯೆ: MSC/ನಕ್ಷೆ/CR/ 03/20–21ರಂತೆ ಪ್ರಸ್ತಾಪಿತ ಸರ್ವೆ ಸಂಖ್ಯೆ ಜಮೀನುಗಳ ಪೈಕಿ 02ಎ–13ಗು ಪ್ರದೇಶವು ರೈಲ್ವೆಗೆ ಭೂಸ್ವಾಧೀನವಾಗಿರುವುದಾಗಿ ನಮೂದಿಸಿದ್ದು, ಸರ್ವೆ ಸಂಖ್ಯೆ:24/6ರಲ್ಲಿ 0ಎ–10ಗು ಬಂಡಿದಾರಿಯು ಪ್ರಸ್ತುತ 13.8ಮೀ–14.0ಮೀ ಅಗಲಕ್ಕೆ ಅಭಿವೃದ್ಧಿ ಹೊಂದಿರುವುದಾಗಿ, ಸದರಿ ರಸ್ತೆಯಿಂದ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕವಿರುವುದಾಗಿ ಗುರುತಿಸಲಾಗಿದೆ.

ದಿನಾಂಕ:30.07.2020ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಿಂದ ವಂಡರ್–ಲಾ ಕಡೆಗೆ ಹೋಗುವ ಸುಮಾರು 12.0ಮೀ–14.0ಮೀ ಅಗಲದ ರಸ್ತೆಯಿಂದ ಸಂಪರ್ಕವಿದ್ದು, ಜಮೀನಿನಿಂದ ಸುಮಾರು 150ಮೀ–200ಮೀ ಅಂತರದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತವೆ ಹಾಗೂ ಜಮೀನಿನ 500ಮೀ ವ್ಯಾಪ್ತಿಯೊಳಗೆ ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:105/2ಎ1ರಲ್ಲಿನ 03ಎಕರೆ ಜಮೀನಿಗೆ ಪ್ರಾಧಿಕಾರದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅನುಮೋದನೆ ನೀಡಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ07.10.2020ರಂದು "ಪ್ರಜಾವಾಣಿ" ಮತ್ತು "ಟೈಮ್ಸ್ ಆಫ್ ಇಂಡಿಯಾ" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಆಹ್ವಾನಿಸಿ, ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಹಾಗಾಗಿ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರಂತೆ ಪ್ರಶ್ನಿತ ಜಮೀನಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಿಂದ ವಂಡರ್–ಲಾ ಕಡೆಗೆ ಹೋಗುವ ಸುಮಾರು 12.0ಮೀ–14.0ಮೀ ಅಗಲದ ರಸ್ತೆಯಿಂದ ಸಂಪರ್ಕವಿದ್ದು, ಜಮೀನಿನ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ತಾಳೆ ಹೊಂದುತ್ತಿರುವುದರಿಂದ ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಛೇರಿಗಳಿಂದ ಮಾಹಿತಿಯನ್ನು ನೀಡಿರುವುದರಿಂದ ಮತ್ತು ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ ಕೆಟಿಸಿಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಲಾಗಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವ ಹಿನ್ನಲೆಯಲ್ಲಿ, ಪ್ರಸ್ತಾಪಿತ ಜಮೀನಿನ ವಿನ್ಯಾಸ ಅನುಮೋದನೆ ಸಮಯದಲ್ಲಿ ಜಮೀನಿನಲ್ಲಿ ಹಾದುಹೋಗಿರುವ ರಸ್ತೆಯನ್ನು ಒಳಗೊಂಡಂತೆ ಪ್ರಾಧಿಕಾರದ ರಸ್ತೆ ಪರಿಚಲನಾ ನಕ್ಷೆಯಂತೆ ಪ್ರಸ್ತಾಪಿಸಿರುವ 24.38ಮೀ (80ಅಡಿ) ಅಗಲದ ರಸ್ತೆಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುವ ಹಾಗೂ ಪ್ರಸ್ತಾಪಿತ ಜಮೀನಿಗೆ ಹೊಂದಿಕೊಂಡಂತೆ ಇರುವ ರೈಲ್ವೆ ಗಡಿಗೆ ಅಗತ್ಯ ಬಫರ್ ಕಾಯ್ದಿರಿಸುವ ಷರತ್ತಿಗೊಳಪಟ್ಟು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 24/1ರ 01ಎ–17¼ಗು, 24/2ರ 01ಎ–17¼ಗು, 24/3ರ 01ಎ–17¼ಗು, 24/4ರ 0ಎ–19ಗು, 24/5ರ 0ಎ–30ಗು ಮತ್ತು ಸರ್ವೆ ಸಂಖ್ಯೆ:24/6ರ 0ಎ–38¼ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ

ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 24/1ರ 01ಎ–17¼ಗು, 24/2ರ 01ಎ–17¼ಗು, 24/3ರ 01ಎ–17¼ಗು, 24/4ರ 0ಎ–19ಗು, 24/5ರ 0ಎ–30ಗು ಮತ್ತು ಸರ್ವೆ ಸಂಖ್ಯೆ:24/6ರ 0ಎ–38¼ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಶ್ನಿತ ಜಮೀನಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಿಂದ ವಂಡರ್–ಲಾ ಕಡೆಗೆ ಹೋಗುವ ಸುಮಾರು 12.0ಮೀ–14.0ಮೀ ಅಗಲದ ರಸ್ತೆಯಿಂದ ಸಂಪರ್ಕವಿದ್ದು, ಜಮೀನಿನ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಪ್ರಸ್ತಾಪಿತ ಜಮೀನಿನ ವಿನ್ಯಾಸ ಅನುಮೋದನೆ ಸಮಯದಲ್ಲಿ ಜಮೀನಿನಲ್ಲಿ ಹಾದುಹೋಗಿರುವ ರಸ್ತೆಯನ್ನು ಒಳಗೊಂಡಂತೆ ಪ್ರಾಧಿಕಾರದ ರಸ್ತೆ ಪರಿಚಲನಾ ನಕ್ಷೆಯಂತೆ ಪ್ರಸ್ತಾಪಿಸಿರುವ 24.38ಮೀ (80ಅಡಿ) ಅಗಲದ ರಸ್ತೆಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುವ ಹಾಗೂ ಪ್ರಸ್ತಾಪಿತ ಜಮೀನಿಗೆ ಹೊಂದಿಕೊಂಡಂತೆ ಇರುವ ರೈಲ್ವೆ ಗಡಿಗೆ ಅಗತ್ಯ ಬಫರ್ ಕಾಯ್ದಿರಿಸುವ ಷರತ್ತಿಗೊಳಪಟ್ಟು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 24/1ರ 01ಎ–17¼ಗು, 24/2ರ 01ಎ–17¼ಗು, 24/3ರ 01ಎ–17¼ಗು, 24/4ರ 0ಎ–19ಗು, 24/5ರ 0ಎ–30ಗು ಮತ್ತು ಸರ್ವೆ ಸಂಖ್ಯೆ:24/6ರ 0ಎ–38¼ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

5) **ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಡಿ.ಕೃಷ್ಣ ಬಿನ್ ಲೇಟ್ ಕೆ.ಎಂ.ದಾಸೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.**

******

ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರುಗಳು ಅರ್ಜಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ ಹಾಗೂ ಪ್ರಸ್ತಾಪಿತ ಜಮೀನಿನ ಮಧ್ಯ ಭಾಗದಲ್ಲಿ ಕಾಲುವೆ ಹಾದುಹೋಗಿರುವುದನ್ನು ಗಮನಿಸಲಾಗಿದೆ.**

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಭೂಸ್ವಾ–2/ಬಿಎಂಐಸಿಪಿ/ಸಿಆರ್:/07/2020–21, ದಿನಾಂಕ:01.10.2020ರಲ್ಲಿ "ಬಿಎಂಐಸಿ ಯೋಜನೆಗೆ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ವಿಸ್ತೀರ್ಣದ ಜಮೀನುಗಳಿಗೆ ಈ ತಹಲ್‌ವರೆವಿಗೂ ಭೂಸ್ವಾಧೀನದ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ಮೈಸೂರು ರವರ ಪತ್ರ ಸಂಖ್ಯೆ: ಭೂಸ್ವಾ(7) ಸಿ.ಆರ್/ /2020–21/96, ದಿನಾಂಕ:05.06.2020 ರಲ್ಲಿ " ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳ ಪಶ್ಚಿಮಕ್ಕೆ ಬನ್ನೂರು ಮುಖ್ಯ ರಸ್ತೆಯಿಂದ ಮಹದೇವಪುರಕ್ಕೆ ಹೋಗುವ ಹಾಲಿ 15.0ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆ ಇದ್ದು, ಸದರಿ ರಸ್ತೆಯಿಂದ ಸಂಪರ್ಕವಿರುತ್ತದೆ. ಪ್ರಸ್ತಾಪಿತ ಜಮೀನುಗಳಿಂದ ಸುಮಾರು 350–500ಮೀ ವ್ಯಾಪ್ತಿಯಲ್ಲಿ ತರಿಪುರ ಗ್ರಾಮದ ಸರ್ವೆ ಸಂಖ್ಯೆ:300ರ 03ಎ–02ಗು, 301ರ 02ಎ–38$^{1}/_{2}$ಗು, 302ರ 03ಎ–19$^{1}/_{2}$ಗು ಒಟ್ಟು 09ಎ–20ಗು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳು ಇರುತ್ತವೆ ಮತ್ತು ಸುಮಾರು 500 ರಿಂದ 600ಮೀ ಅಂತರದಲ್ಲಿ ತರೀಪುರ ಗ್ರಾಮದ ಸರ್ವೆ ಸಂಖ್ಯೆ:236/2ರ 01ಎ–07ಗು, 237/2ರ 02ಎ–30ಗು ಒಟ್ಟು 03ಎ–37ಗು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುವ ಜಮೀನುಗಳು ಇರುತ್ತವೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 14.10.2020ರಂದು "ಪ್ರಜಾವಾಣಿ" ಮತ್ತು "ಡೆಕ್ಕನ್ ಹೆರಾಲ್ಡ್" ದಿನಪತ್ರಿಕೆಗಳಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಪರಿಶೀಲಿಸಲಾಗಿ, ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ನಿಗಧಿತ ಅವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿರುವುದರಿಂದ, ಸದರಿ ಜಮೀನುಗಳಿಗೆ ಹಾಲಿ 15.0ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಇರುವುದರಿಂದ ಹಾಗೂ ಪ್ರಸ್ತಾಪಿತ ಜಮೀನುಗಳ ಸುಮಾರು 350–500ಮೀ ವ್ಯಾಪ್ತಿಯಲ್ಲಿ ತರಿಪುರ ಗ್ರಾಮದ ಸರ್ವೆ ಸಂಖ್ಯೆ:300ರ 03ಎ–02ಗು, 301ರ 02ಎ–38$^{1}/_{2}$ಗು, 302ರ 03ಎ–19$^{1}/_{2}$ಗು ಒಟ್ಟು 09ಎ–20ಗು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳು ಇರುವುದರಿಂದ ಮತ್ತು ಸುಮಾರು 500 ರಿಂದ 600ಮೀ ಅಂತರದಲ್ಲಿ ತರೀಪುರ ಗ್ರಾಮದ ಸರ್ವೆ ಸಂಖ್ಯೆ:236/2ರ 01ಎ–07ಗು, 237/2ರ 02ಎ–30ಗು ಒಟ್ಟು 03ಎ–37ಗು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುವ ಜಮೀನುಗಳು ಇರುವುದರಿಂದ ಹಾಗೂ ಪ್ರಸ್ತಾಪಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಛೇರಿಗಳಿಂದ ಮಾಹಿತಿಯನ್ನು ಸ್ವೀಕೃತವಾಗಿರುವುದರಿಂದ ಮತ್ತು ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ತಾಳೆ ಹೊಂದುತ್ತಿರುವುದರಿಂದ, ಪ್ರಸ್ತಾಪಿತ ಜಮೀನಿನ ಮಧ್ಯಭಾಗದಲ್ಲಿ ಹಾದುಹೋಗಿರುವ ಕಾಲುವೆಗೆ ನಿಯಮಾನುಸಾರ ಬಫರ್ ನಿಗಧಿಪಡಿಸುವ ಷರತ್ತಿಗೊಳಪಡಿಸಿ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ,

ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ಜಮೀನುಗಳಿಗೆ ಹಾಲಿ 15.0ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಇರುವುದರಿಂದ ಹಾಗೂ ಪ್ರಸ್ತಾಪಿತ ಜಮೀನುಗಳಿಂದ ಸುಮಾರು 350–500ಮೀ ವ್ಯಾಪ್ತಿಯಲ್ಲಿ ತರೀಪುರ ಗ್ರಾಮದ ಸರ್ವೆ ಸಂಖ್ಯೆ:300ರ 03ಎ–02ಗು, 301ರ 02ಎ–38½ಗು, 302ರ 03ಎ–19½ಗು ಒಟ್ಟು 09ಎ–20ಗು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳು ಇರುವುದರಿಂದ ಮತ್ತು ಸುಮಾರು 500 ರಿಂದ 600ಮೀ ಅಂತರದಲ್ಲಿ ತರೀಪುರ ಗ್ರಾಮದ ಸರ್ವೆ ಸಂಖ್ಯೆ:236/2ರ 01ಎ–07ಗು, 237/2ರ 02ಎ–30ಗು ಒಟ್ಟು 03ಎ–37ಗು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಜಮೀನುಗಳು ಇರುವುದರಿಂದ, ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಪ್ರಸ್ತಾಪಿತ ಜಮೀನಿನ ಮಧ್ಯದಲ್ಲಿ ಹಾದುಹೋಗಿರುವ ಕಾಲುವೆಗೆ ನಿಯಮಾನುಸಾರ ಅಗತ್ಯ ಬಫರ್ ಕಾಯ್ದಿರಿಸುವ ಷರತ್ತಿಗೊಳಪಟ್ಟು ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

6) ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 104/5ರ 0ಎ–37ಗು, 104/6ರ 01ಎ–10ಗು ಒಟ್ಟು 02ಎ–07ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎನ್.ರವಿಶಂಕರ್ ಬಿನ್ ನಾಗಪ್ಪ ಶೆಟ್ಟಿ ಇವರು ಸಲ್ಲಿಸಿರುವ ಮನವಿ ಕುರಿತು.

******

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 104/5ರ 0ಎ–37ಗು, 104/6ರ 02ಎ–06ಗು, 105/2ರ 0ಎ–15ಗು, 105/3ರ 0ಎ–15ಗು ಒಟ್ಟು 03ಎ–33ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರುಗಳು ಅರ್ಜಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:104/5ರ ಜಮೀನನ್ನು ವ್ಯವಸಾಯ ವಲಯದಲ್ಲಿ, ಸರ್ವೆ ಸಂಖ್ಯೆ:104/6ರ ಜಮೀನನ್ನು ಭಾಗಶಃ ವಸತಿ ಮತ್ತು ಭಾಗಶಃ ವ್ಯವಸಾಯ ವಲಯದಲ್ಲಿ ಹಾಗೂ ಸರ್ವೆ ಸಂಖ್ಯೆ:105/2 ಮತ್ತು 105/3ರ ಜಮೀನನ್ನು ವಸತಿ ವಲಯದಲ್ಲಿ ಕಾಯ್ದಿರಿಸಲಾಗಿದೆ.**

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಭೂಸ್ವಾ–2/ಬಿಎಂಐಸಿಪಿ/ಸಿಆರ್:/5/2020–21, ದಿನಾಂಕ:03.07.2020ರಲ್ಲಿ "ಬಿಎಂಐಸಿ ಯೋಜನೆಗೆ ಶ್ರೀರಂಗಪಟ್ಟಣ ತಾಲ್ಲೂಕು, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 104/5ರ 0ಎ–37ಗು, 104/6ರ 02ಎ–06ಗು, 105/2ರ 0ಎ–15ಗು, 105/3ರ 0ಎ–15ಗು ಒಟ್ಟು 03ಎ–33ಗು ವಿಸ್ತೀರ್ಣದ ಜಮೀನುಗಳಿಗೆ ಈ ತಹಲ್‌ವರೆವಿಗೂ ಭೂಸ್ವಾಧೀನದ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ಮೈಸೂರು ರವರ ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/201/2017–18/698, ದಿನಾಂಕ:14.09.2017 ರಲ್ಲಿ "ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 104/5ರ 0ಎ–37ಗು, 104/6ರ 02ಎ–06ಗು, 105/2ರ 0ಎ–15ಗು, 105/3ರ 0ಎ–15ಗು ಜಮೀನುಗಳನ್ನು ಇದುವರೆವಿಗೂ ಯಾವುದೇ ಯೋಜನೆಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ದಿನಾಂಕ:06.06.2020ರಂದು ಪ್ರಶ್ನಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಸರ್ವೆ ಸಂಖ್ಯೆ:104/5 ಮತ್ತು 104/6ರ ಪಶ್ಚಿಮಕ್ಕೆ ಮೈಸೂರಿನಿಂದ ಮಹದೇವಪುರಕ್ಕೆ ಹೋಗುವ ರಸ್ತೆಯಿಂದ ಉಪಗಮನಗೊಳ್ಳುವ 8.0ಮೀ ಅಗಲದ ನಾಲಾ ರಸ್ತೆಯಿಂದ ಸಂಪರ್ಕವಿರುತ್ತದೆ. ಪ್ರಸ್ತಾವಿತ ಜಮೀನುಗಳು ಹಂಪಾಪುರ ಗ್ರಾಮದ ಗ್ರಾಮಠಾಣಗೆ ಹೊಂದಿಕೊಂಡಿರುತ್ತವೆ. ಸದರಿ ನಾಲಾ ರಸ್ತೆಯನ್ನು ಸಾರ್ವಜನಿಕ ರಸ್ತೆ ಎಂದು ಪರಿಗಣಿಸಿ ಸಂಪರ್ಕ ಪಡೆಯಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ:4, ವಿ.ಸಿ.ಸಿ ಉಪ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ರವರು ಪತ್ರ ಸಂಖ್ಯೆ:ಕಾ.ಇಂ/ನಂ.2ಪಿ.ಸಿ.ಸಿ.ವಿ/ಮೈ/2020–21/45–46, ದಿನಾಂಕ:20.05.2020ರಲ್ಲಿ ಕೆಲವು ಷರತ್ತುಗಳಿಗೊಳಪಡಿಸಿ ಅನುಮತಿ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 16.10.2020ರಂದು "ವಿಜಯ ಕರ್ನಾಟಕ" ಮತ್ತು "ಡೆಕ್ಕನ್ ಹೆರಾಲ್ಡ್" ದಿನಪತ್ರಿಕೆಗಳಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಪರಿಶೀಲಿಸಲಾಗಿ, ಪ್ರಾಧಿಕಾರಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯನ್ನು ಮತ್ತು ಪ್ರಶ್ನಿತ ಜಮೀನುಗಳ ಜಂಟಿ ಸರ್ವೆ ನಕ್ಷೆಯನ್ನು ಪರಿಶೀಲಿಸಲಾಗಿ, ಸ.ಸಂ.104/6ರ 02ಎ–06ಗು ಪೈಕಿ 0ಎ–36ಗು, ಸ.ಸಂ.105/2ರ 0ಎ–15ಗು ಮತ್ತು ಸ.ಸಂ.105/3ರ 0ಎ–15ಗು ಒಟ್ಟು 01ಎ–26ಗು ಜಮೀನನ್ನು ವಸತಿ ವಲಯದಲ್ಲಿ, ಉಳಿಕೆ ಸ.ಸಂ.104/5ರ 0ಎ–37ಗು ಮತ್ತು ಸ.ಸಂ.104/6ರ 01ಎ–10ಗು ಒಟ್ಟು 02ಎ–07ಗು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ನಿಗಧಿತ ಅವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿರುವುದರಿಂದ, ಸರ್ವೆ ಸಂಖ್ಯೆ:104/5 ಮತ್ತು 104/6 ಪಶ್ಚಿಮಕ್ಕೆ 8.0ಮೀ ಅಗಲದ ನಾಲಾ ರಸ್ತೆಯಿಂದ ಸಂಪರ್ಕವಿದ್ದು, ಪ್ರಶ್ನಿತ ಜಮೀನುಗಳು ಹಂಪಾಪುರ ಗ್ರಾಮದ ಗ್ರಾಮಠಾಣಗೆ ಹೊಂದಿಕೊಂಡಿರುವುದರಿಂದ, ಹಾಗೂ ಪ್ರಸ್ತಾಪಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಛೇರಿಗಳಿಂದ ಮಾಹಿತಿಯನ್ನು ಸ್ವೀಕೃತವಾಗಿರುವುದರಿಂದ ಮತ್ತು ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ತಾಳೆ ಹೊಂದುತ್ತಿರುವುದರಿಂದ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:104/6ರ 02ಎ–06ಗು ಪೈಕಿ 0ಎ–36ಗು, 105/2ರ 0ಎ–15ಗು ಮತ್ತು 105/3ರ 0ಎ–15ಗು ಒಟ್ಟು 01ಎ–26ಗು ವಿಸ್ತೀರ್ಣದ ಜಮೀನನ್ನು ವಸತಿ ವಲಯದಲ್ಲಿ ಕಾಯ್ದಿರಿಸಿರುವುದರಿಂದ, ಅದನ್ನು ಹೊರತುಪಡಿಸಿ ಉಳಿಕೆ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಿರುವ ಸರ್ವೆ ಸಂಖ್ಯೆ:104/5ರ 0ಎ–37ಗು ಮತ್ತು 104/6ರ 01ಎ–10ಗು ಒಟ್ಟು 02ಎ–07ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 104/5ರ 0ಎ–37ಗು, 104/6ರ 01ಎ–10ಗು ಒಟ್ಟು 02ಎ–07ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸರ್ವೆ ಸಂಖ್ಯೆ:104/5 ಮತ್ತು 104/6 ಪಶ್ಚಿಮಕ್ಕೆ 8.0ಮೀ ಅಗಲದ ನಾಲಾ ರಸ್ತೆಯಿಂದ ಸಂಪರ್ಕವಿದ್ದು, ಪ್ರಶ್ನಿತ ಜಮೀನುಗಳು ಹಂಪಾಪುರ ಗ್ರಾಮದ ಗ್ರಾಮಠಾಣಗೆ ಹೊಂದಿಕೊಂಡಿರುವುದರಿಂದ, ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:104/6ರ 02ಎ–06ಗು ಪೈಕಿ 0ಎ–36ಗು, 105/2ರ 0ಎ–15ಗು ಮತ್ತು 105/3ರ 0ಎ–15ಗು ಒಟ್ಟು 01ಎ–26ಗು ವಿಸ್ತೀರ್ಣದ ಜಮೀನನ್ನು ವಸತಿ ವಲಯದಲ್ಲಿ ಕಾಯ್ದಿರಿಸಿರುವುದರಿಂದ, ಅದನ್ನು ಹೊರತುಪಡಿಸಿ ಉಳಿಕೆ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಿರುವ ಸರ್ವೆ ಸಂಖ್ಯೆ:104/5ರ 0ಎ–37ಗು ಮತ್ತು 104/6ರ 02ಎ–06ಗು ಪೈಕಿ 01ಎ–10ಗು ಒಟ್ಟು 02ಎ–07ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

7) **ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47/1ರಲ್ಲಿ 09ಎ–13ಗು ಜಮೀನಿಗೆ ಪಡೆದಿರುವ ಭೂ ಉಪಯೋಗ ಬದಲಾವಣೆಯ ಆದೇಶ ರದ್ದುಪಡಿಸಲು ಶ್ರೀ ಜಿ.ಕಿರಣ್ ಕುಮಾರ್ ರವರು ದೂರು ಮನವಿ ಸಲ್ಲಿಸಿರುವ ಕುರಿತು.**

******

ಶ್ರೀ ಅರುಣ್ ಅಶೇರ್ ನಿರ್ದೇಶಕರು, ಮೆ॥ ಯೂನಿಫೋಸ್ ಎಂಟರ್ ಪ್ರೈಸಸ್ ರವರು ಪ್ರಾಧಿಕಾರಕ್ಕೆ ದಿನಾಂಕ:15.04.2008 ರಂದು ಅರ್ಜಿ ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47/1 ರಲ್ಲಿ 09ಎ–13ಗು ಜಮೀನಿಗೆ ವ್ಯವಸಾಯ ವಲಯದಿಂದ ಕೈಗಾರಿಕಾ ಉದ್ದೇಶಕ್ಕೆ ಭೂ

ಉಪಯೋಗ ಬದಲಾವಣೆಗೆ ಕೋರಿ ಸಲ್ಲಿಸಿದ್ದ ದಾಖಲೆಗಳ ಆಧಾರದ ಮೇಲೆ ಸರ್ಕಾರದ ಆದೇಶ ಸಂಖ್ಯೆ: ನಅಇ 183 ಬೆಂರೂಪ್ರಾ 2009, ಬೆಂಗಳೂರು, ದಿನಾಂಕ:25.07.2009 ರಂತೆ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47/1ರಲ್ಲಿ 09ಎ–20ಗು ವಿಸ್ತೀರ್ಣದ ಪೈಕಿ ಮೆ॥ ನೈಸೆಲ್ ರವರಿಗೆ ಭೂಸ್ವಾಧೀನವಾಗಿರುವ 0ಎ–07ಗು ವಿಸ್ತೀರ್ಣದ ಜಮೀನನ್ನು ಹೊರತುಪಡಿಸಿ 09ಎ–13ಗು ಜಮೀನನ್ನು ವ್ಯವಸಾಯ ವಲಯದಿಂದ ಕೈಗಾರಿಕಾ (ಬಯೋಟೆಕ್ ರಿಸರ್ಚ್ ಲ್ಯಾಬೊರೇಟರಿ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ: ಬಿ.ಎಂ.ಐ.ಸಿ.ಎ.ಪಿ.ಎ/ 23/ ಭೂಉಬ/ಎಳೇನಹಳ್ಳಿ/ 12/ 2009–10, ದಿನಾಂಕ:30.07.2009 ರಲ್ಲಿ ಭೂ ಉಪಯೋಗ ಬದಲಾವಣೆ ಆದೇಶ ಪತ್ರ ನೀಡಲಾಗಿದೆ. ಶ್ರೀ ಅರುಣ್ ಅಶೇರ್ ನಿರ್ದೇಶಕರು, ಮೆ॥ ಯೂನಿಫೋಸ್ ಎಂಟರ್ ಪ್ರೈಸಸ್ ಪತ್ರ ದಿನಾಂಕ:10.05.2010ರ ಮನವಿಯಲ್ಲಿ ಭೂ ಉಪಯೋಗ ಬದಲಾವಣೆಯಾಗಿರುವ ಸದರಿ ಜಮೀನನ್ನು ಕೈಗಾರಿಕಾ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಕುರಿತು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರ ಪತ್ರ ಸಂಖ್ಯೆ: ನಗ್ರಾಯೋ(23)/ ಜಂ.ನಿ(ಬೆಂ.ವಿ)/ ಭೂಉಬ/ 132/ 2010–11, ದಿನಾಂಕ:03.06.2010ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 14ಎ(3)ರಲ್ಲಿ ಕೈಗಾರಿಕೆಯಿಂದ ವಸತಿ ಉಪಯೋಗಕ್ಕಾಗಿ ಬದಲಾಯಿಸಲು ಕಾಯ್ದೆಯಲ್ಲಿ ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಸಂಬಂಧ ಪ್ರಾಧಿಕಾರದ ಪತ್ರ ಸಂಖ್ಯೆ:ಬಿ.ಎಂ.ಐ.ಸಿ.ಎ.ಪಿ.ಎ/23/ಭೂಉಬ/ಎಳೇನಹಳ್ಳಿ/12/2008–09, ದಿನಾಂಕ:18.06.2010ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47(47/1) ರಲ್ಲಿ 09ಎ–13ಗು ಜಮೀನಿಗೆ ಕೈಗಾರಿಕಾ ವಲಯದಿಂದ ವಸತಿ ಉದ್ದೇಶಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ, 2004ರ ಕಲಂ 14ಎ(3) ರನ್ವಯ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಶ್ರೀ ಜಿ. ಕಿರಣ್ ಕುಮಾರ್ ರವರು ದಿನಾಂಕ:19.03.2020ರ ದೂರು ಅರ್ಜಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47(47/1) ರಲ್ಲಿ ಮೆ॥ ಯೂನಿಫೋಸ್ ಎಂಟರ್ ಪ್ರೈಸಸ್.ಲಿ., ರವರು ಕೇವಲ 02ಎ–30ಗು ಜಮೀನಿಗೆ ಮಾತ್ರ ಮಾಲೀಕರಾಗಿದ್ದರೂ ಸಹ ಅವರಿಗೆ ಸೇರಿದ ಜಮೀನನ್ನು ಸೇರಿಸಿ ಒಟ್ಟು 10ಎ–28ಗು ಜಮೀನಿಗೆ ಮಾಲೀಕರೆಂದು ತಪ್ಪು ಮಾಹಿತಿ ನೀಡಿ ಹಾಗೂ ಸೃಷ್ಟಿಸಿದ ನಕಲಿ ದಾಖಲೆಗಳನ್ನು ಪ್ರಾಧಿಕಾರಕ್ಕೆ ನೀಡಿ ಕಾನೂನು ಬಾಹಿರವಾಗಿ ಪಡೆದಿರುವ ಭೂ ಉಪಯೋಗ ಬದಲಾವಣೆಯ ಎರಡು ಆದೇಶಗಳನ್ನು ರದ್ದುಪಡಿಸಲು ಹಾಗೂ ಶ್ರೀ ಅರುಣ್ ಅಶೇರ್ ನಿರ್ದೇಶಕರು, ಮೆ॥ ಯೂನಿಫೋಸ್ ಎಂಟರ್ ಪ್ರೈಸಸ್ ವಿರುದ್ಧ ಕಾನೂನು ಕ್ರಮಜರುಗಿಸಬೇಕೆಂದು ಕೋರಿರುತ್ತಾರೆ. ಪ್ರಾಧಿಕಾರದ ದಿನಾಂಕ:12.05.2020ರ ಪತ್ರದಲ್ಲಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47/1ರ ವಿಸ್ತೀರ್ಣಕ್ಕೂ ಪ್ರಾಧಿಕಾರದಿಂದ ನೀಡಿರುವ ಭೂ ಉಪಯೋಗ ಬದಲಾವಣೆ ಆದೇಶಗಳ ವಿಸ್ತೀರ್ಣಕ್ಕೂ ತಾಳೆ ಹೊಂದುವುದಿಲ್ಲ ಮತ್ತು ಭೂ ಉಪಯೋಗ ಬದಲಾವಣೆ ಸಮಯದಲ್ಲಿ ಅರ್ಜಿದಾರರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಪ್ರಾಧಿಕಾರದಿಂದ ಕ್ರಮವಾಗಿ ದಿನಾಂಕ:30.07.2009ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 14–ಎ ರಡಿಯಲ್ಲಿ ವ್ಯವಸಾಯ ವಲಯದಿಂದ ಕೈಗಾರಿಕೆ ಉದ್ದೇಶಕ್ಕಾಗಿ ಹಾಗೂ ದಿನಾಂಕ:18.06.2010ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 14–ಎ(3) ರಡಿಯಲ್ಲಿ ಕೈಗಾರಿಕಾ ಉದ್ದೇಶದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಆದೇಶ ನೀಡಲಾಗಿರುತ್ತದೆ ಎಂದು ಮತ್ತು ಪ್ರಾಧಿಕಾರದಿಂದ ನೀಡಿರುವ ಸದರಿ ದಿನಾಂಕ:30.07.2009 ಹಾಗೂ ದಿನಾಂಕ:18.06.2010 ರ ಭೂ ಉಪಯೋಗ ಬದಲಾವಣೆ ಆದೇಶಗಳು ಜಮೀನಿನ ಮಾಲೀಕತ್ವ ನಿರೂಪಿಸುವ ದಾಖಲೆಗಳಾಗಿರುವುದಿಲ್ಲ ಮತ್ತು ಸದರಿ ಸರ್ವೆ ಸಂಖ್ಯೆ:47/1 ರ ಜಮೀನಿನ ಮಾಲೀಕತ್ವದ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ O.S.No:206/2020 ರಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣ ಇತ್ಯರ್ಥವಾಗಿರುವುದಿಲ್ಲ ಎಂದು, ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವಾಗ ಪ್ರಾಧಿಕಾರದಿಂದ ಯಾವುದೇ ಕ್ರಮವಹಿಸಲು ಬರುವುದಿಲ್ಲ ಎಂದು ಹಾಗೂ ಜಮೀನಿನ ಮಾಲೀಕತ್ವದ ಬಗ್ಗೆ ನ್ಯಾಯಾಲಯದ ತೀರ್ಮಾನ ಅಂತಿಮವಾಗಿರುತ್ತದೆ ಎಂದು ಶ್ರೀ ಜಿ. ಕಿರಣ್ ಕುಮಾರ್ ರವರಿಗೆ ತಿಳಿಸಲಾಗಿರುತ್ತದೆ.

ಶ್ರೀ ಜಿ. ಕಿರಣ್ ಕುಮಾರ್ ರವರು ಮತ್ತೊಮ್ಮೆ ದಿನಾಂಕ:29.05.2020 ರಂದು ಮನವಿ ಸಲ್ಲಿಸಿ, ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇರುವ ದಾವೆ/ ಪ್ರಕರಣ O.S.No:206/2020 ರ ದಾವೆಯು ಮೆ॥ ಯೂನಿಫೋಸ್ ಎಂಟರ್ ಪ್ರೈಸಸ್ ಲಿ., ನವರು ಕಾನೂನು ಬಾಹಿರವಾಗಿ ಸೃಷ್ಟಿ ಮಾಡಿಕೊಂಡಿರುವ ಕ್ರಯಪತ್ರಗಳ ಕ್ರಮಬದ್ಧತೆಯನ್ನು ಮಾತ್ರ ಪ್ರಶ್ನಿಸಿ ಸಲ್ಲಿಸಿರುವ ದಾವೆಯಾಗಿರುತ್ತದೆ ಎಂದು ತಿಳಿಸಿ, ಮೆ॥ ಯೂನಿಫೋಸ್ ಎಂಟರ್ ಪ್ರೈಸಸ್ ಲಿ., ರವರು ಸೃಷ್ಟಿ ಮಾಡಿಕೊಂಡು ನಕಲಿ ದಾಖಲೆಗಳನ್ನು ನೀಡಿ ಕಾನೂನು ಬಾಹಿರವಾಗಿ ಪಡೆದಿರುವ ಸದರಿ ಆದೇಶಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಲಂ 76 (ಓ)ರ ಅಡಿಯಲ್ಲಿ ಕೂಲಂಕುಷವಾಗಿ ದಾಖಲೆಗಳನ್ನು ಪರಿಶೀಲಿಸಿ ವಿಚಾರಣೆ ನಡೆಸಿ, ಸದರಿ ದಿನಾಂಕ:30.07.2009 ಮತ್ತು ದಿನಾಂಕ:18.06.2010ರ ಆದೇಶಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಾಲಂ 76(ಓ)ರ ಅಡಿಯಲ್ಲಿ ರದ್ದುಪಡಿಸಿ ಕಾನೂನು ಕ್ರಮಜರುಗಿಸಬೇಕೆಂದು ಕೋರಿರುತ್ತಾರೆ. ಈ ಸಂಬಂಧ ಪ್ರಾಧಿಕಾರದ ದಿನಾಂಕ:10.06.2020 ಮತ್ತು ದಿನಾಂಕ:13.07.2020ರ ಕಾರಣ ಕೇಳಿ ನೋಟೀಸ್ ಗಳಲ್ಲಿ ಸದರಿ ನೋಟೀಸ್ ತಲುಪಿದ 15 ದಿನಗಳ ಒಳಗಾಗಿ ತಮ್ಮ ಸ್ಪಷ್ಟ ಲಿಖಿತ ಹೇಳಿಕೆ ಹಾಗೂ ಪೂರಕ ದಾಖಲೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಲು ಹಾಗೂ ತಪ್ಪಿದಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 76(ಓ) ಪ್ರಕಾರ ಕ್ರಮವಹಿಸಲಾಗುವುದು ಎಂದು ಅರ್ಜಿದಾರರಾದ ಶ್ರೀ ಅರುಣ್ ಅಶೇರ್ ನಿರ್ದೇಶಕರು, ಮೆ॥ ಯೂನಿಫೋಸ್ ಎಂಟರ್ ಪ್ರೈಸಸ್ ರವರಿಗೆ ತಿಳಿಸಲಾಗಿರುತ್ತದೆ. ಆದರೆ, ಈವರೆವಿಗೂ ಸದರಿಯವರಿಂದ ಯಾವುದೇ ಸ್ಪಷ್ಟ ಲಿಖಿತ ಹೇಳಿಕೆ ಹಾಗೂ ಪೂರಕ ದಾಖಲೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ.

ಮೇಲಿನ ಅಂಶಗಳ ಕುರಿತು, ಪ್ರಾಧಿಕಾರದ ದಿನಾಂಕ:31.08.2020ರ ಪತ್ರದಲ್ಲಿ ಶ್ರೀ ಜಿ.ಕಿರಣ್ ಕುಮಾರ್ ರವರು ಈಗಾಗಲೇ ಮಾನ್ಯ ಸಿವಿಲ್ ನ್ಯಾಯಾಲಯದ O.S.No:206/2020 ರಂತೆ ದಾವೆ ಸಲ್ಲಿಸಿರುವುದರಿಂದ, ಸದರಿಯವರ ಕೋರಿರುವಂತೆ ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47/1ರ ಜಮೀನನ್ನು ವ್ಯವಸಾಯ ವಲಯದಿಂದ ಕೈಗಾರಿಕಾ ವಲಯಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿ ಸರ್ಕಾರದಿಂದ ಹೊರಡಿಸಿರುವ ಆದೇಶವನ್ನು ಹಾಗೂ ಸದರಿ ಜಮೀನನ್ನು ಕೈಗಾರಿಕಾ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ನಿಗಧಿಪಡಿಸಿ ಹೊರಡಿಸಿರುವ ಪ್ರಾಧಿಕಾರದ ಆದೇಶವನ್ನು ರದ್ದುಪಡಿಸಲು ಕ್ರಮವಹಿಸಬಹುದೇ ಎಂಬುದರ ಕುರಿತು ಪ್ರಾಧಿಕಾರದ ವಕೀಲರಾದ ಶ್ರೀ ಯೋಗೇಶ್ ನಾಯಕ್ ರವರಿಗೆ ಕಾನೂನು ಅಭಿಪ್ರಾಯ ನೀಡಲು ಕೋರಲಾಗಿತ್ತು. ಅದರಂತೆ, ಶ್ರೀ ಯೋಗೇಶ್ ನಾಯಕ್ ರವರು ತಮ್ಮ ದಿನಾಂಕ:04.10.2020ರ ಪತ್ರದಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.

" This BMICAPA cannot decide the rights of the parties over the land in question, since the same is to be decided by the Civil Court. The dispute is now between the Plaintiff in Suit O.S No. 206/2020 and the Defendants therein. The parties are bound by the decision of the Civil Court. Since the matter is now pending adjudication before civil court, the BMICAPA cannot take any action for consideration of ownership of the land.

Therefore, in my considered opinion, the Authority has to wait for the decision of the Civil Court for taking any further action in the matter " .

ಮೇಲಿನ ಅಂಶಗಳನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47/1ರಲ್ಲಿ 09ಎ-13ಗು ಜಮೀನಿಗೆ ನೀಡಿರುವ ಭೂ

ಉಪಯೋಗ ಬದಲಾವಣೆ ಆದೇಶವನ್ನು ರದ್ದುಪಡಿಸಲು ಶ್ರೀ ಜಿ. ಕಿರಣ್ ಕುಮಾರ್ ರವರು ಕೋರಿ ಸಲ್ಲಿಸಿರುವ ದೂರು ಅರ್ಜಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಶ್ರೀ ಜಿ. ಕಿರಣ್ ಕುಮಾರ್ ರವರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ O.S.No:206/2020 ರಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣ ಇತ್ಯರ್ಥವಾಗಿರುವುದಿಲ್ಲ ಎಂಬ ಅಂಶವನ್ನು ಸಭೆಯು ಗಮನಿಸಿತು ಹಾಗೂ ಈ ಸಂಬಂಧ ಪ್ರಾಧಿಕಾರದ ವಕೀಲರು ನೀಡಿರುವ ಕಾನೂನು ಅಭಿಪ್ರಾಯದಂತೆ ಸದರಿ ಪ್ರಕರಣದಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯದ ಆದೇಶ ಬಂದ ನಂತರ, ಪ್ರಸ್ತಾವನೆಯನ್ನು ಪರಿತೀಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

V ಇತರೆ ವಿಷಯಗಳು

1) ಮಹಾಯೋಜನೆಯ ವಲಯ ನಿಯಮಾವಳಿಯಂತೆ ವಾಣಿಜ್ಯ ವಲಯದಲ್ಲಿ ವಸತಿ ಉಪಯೋಗಕ್ಕೆ ಅನುಮತಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 75 ಬೆಂರೂಪ್ರಾ 2001, ದಿನಾಂಕ:12.02.2004ರಂತೆ ಅನುಮೋದನೆ ದೊರೆತಿದ್ದು, ಮಹಾಯೋಜನೆಯ ವಲಯ ನಿಯಮಾವಳಿಗಳಂತೆ ವಾಣಿಜ್ಯ ವಲಯದಲ್ಲಿ ವಸತಿ ಉದ್ದೇಶಕ್ಕೆ ಅನುಮತಿಸಲು ಅವಕಾಶವಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2005, ದಿನಾಂಕ: 14.02.2005ರಲ್ಲಿ ತಿದ್ದುಪಡಿ ತಂದು ಕಲಂ 14(ಎ)(3) ಅನ್ನು ಜಾರಿಗೆ ತರಲಾಗಿರುತ್ತದೆ. ಅದರಂತೆ, ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿರುತ್ತದೆ.

Notwithstanding anything contrary contained in the Act, if the change in land use or development is from **commercial** or **industrial** to residential or from industrial to commercial and the stipulated fee is paid and the Local Planning Authority is informed prior to effecting the change, the permission for such change of land use or development shall be deemed to have been given.

ನಂತರ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರಂತೆ ಕಲಂ 14(ಎ)(3) ಅನ್ನು ಕೈಬಿಡಲಾಗಿದೆ. ಸರ್ಕಾರದ ಪತ್ರ ಸಂಖ್ಯೆ:ನಅಇ 09 ಬೆಮಪ್ರಾ 2017, ದಿನಾಂಕ:27.09.2018ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ತಿದ್ದುಪಡಿ ಪೂರ್ವದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 14(ಎ)(3)ರಲ್ಲಿ ಕಲ್ಪಿಸಿರುವ ಅವಕಾಶದನ್ವಯ ರಾಜ್ಯದ ಅನೇಕ ಅನುಮೋದಿತ ಮಹಾಯೋಜನೆಗಳ ವಲಯ ನಿಯಮಾವಳಿಗಳಲ್ಲಿ ಕೈಗಾರಿಕಾ ವಲಯದಲ್ಲಿ ವಸತಿ ಮತ್ತು ವಾಣಿಜ್ಯ ಉಪಯೋಗಗಳನ್ನು ಅನುಮತಿಸಲಾಗುತ್ತಿತ್ತು. ಆದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ತಿದ್ದುಪಡಿಯಲ್ಲಿ ಕಲಂ 14(ಎ)(3)ಅನ್ನು ಕೈಬಿಡಲಾಗಿದೆ. ಆದುದರಿಂದ, ವಲಯ ನಿಯಮಾವಳಿಗಳಲ್ಲಿ ಏನೇ ಉಲ್ಲೇಖವಿದ್ದರೂ, ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಗಳಿಗೆ ಕುರಿತಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರನ್ವಯ ಕ್ರಮವಹಿಸುವಂತೆ ನಿರ್ದೇಶಿಸಲಾಗಿದೆ. ಅದರಂತೆ ಮಹಾಯೋಜನೆಯಂತೆ ಕೈಗಾರಿಕಾ ವಲಯದಲ್ಲಿ ವಾಣಿಜ್ಯ ಮತ್ತು ವಸತಿ ಉದ್ದೇಶಕ್ಕೆ ಯಾವುದೇ ಅನುಮತಿ ನೀಡಲಾಗಿರುವುದಿಲ್ಲ.

ಆದರೆ, ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ವಿನ್ಯಾಸ–01/16/2018–19, ದಿನಾಂಕ:26.04.2019ರಲ್ಲಿ ಸರ್ಕಾರಕ್ಕೆ ಪತ್ರ ಬರೆದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)(3) ಅನ್ನು ಕೈಬಿಡಲಾಗಿದ್ದು, ಮಹಾಯೋಜನೆಯಂತೆ ವಾಣಿಜ್ಯ ವಲಯದ ಪ್ರದೇಶಗಳನ್ನು ವಸತಿ ಉದ್ದೇಶಕ್ಕೆ ಭೂ

ಉಪಯೋಗ ಬದಲಾವಣೆ ಮಾಡಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಂತೆ ಕ್ರಮವಹಿಸುವ ಸಂಬಂಧ ರಾಜ್ಯ ವ್ಯಾಪಿ ಒಂದೇ ತರಹದ ವಿಧಾನವನ್ನು ಅನುಸರಿಸಬೇಕಾಗಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) 2005 ಕಾಯ್ದೆ, 13(ಇ) ರಂತೆ ಸರ್ಕಾರದ ಹಂತದಲ್ಲಿ ಕ್ರಮವಹಿಸಬೇಕಾಗಿದ್ದು, ರಾಜ್ಯ ವ್ಯಾಪಿ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರ, ಯೋಜನಾ ಪ್ರಾಧಿಕಾರ, ಪುರಸಭೆ ಯೋಜನಾ ಪ್ರಾಧಿಕಾರಕ್ಕೆ ಅನ್ವಯವಾಗುವಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2005 ಕಲಂ 13(ಇ) ರಡಿಯಲ್ಲಿ ಅಧಿಸೂಚನೆ ಹೊರಡಿಸಲು ಅಗತ್ಯ ಕ್ರಮವಹಿಸಲು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಆದರೆ, ಈವರೆವಿಗೂ ಈ ಬಗ್ಗೆ ಯಾವುದೇ ಮಾಹಿತಿ/ನಿರ್ದೇಶನ ಸರ್ಕಾರದಿಂದ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2005, ದಿ: 14.02.2005ರನ್ವಯ ಕಲಂ 14(ಎ)(3)ರ ತಿದ್ದುಪಡಿ ಪೂರ್ವದಲ್ಲಿಯೇ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದಿಂದ ದಿನಾಂಕ:12.02.2004ರಂದು ಅಂತಿಮ ಅನುಮೋದನೆ ದೊರೆತಿದ್ದು, ಸದರಿ ಮಹಾಯೋಜನೆಯ ವಲಯ ನಿಯಮಾವಳಿಯಲ್ಲಿ ವಾಣಿಜ್ಯ ವಲಯದಲ್ಲಿ ವಸತಿ ಉದ್ದೇಶಕ್ಕೆ ಅನುಮತಿಸಲು ಅವಕಾಶವಿರುತ್ತದೆ. ಹಾಗಾಗಿ, ಸರ್ಕಾರದಿಂದ ಸೂಕ್ತ ನಿರ್ದೇಶನ ಬರುವವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಇತರೆ ಪ್ರಾಧಿಕಾರಗಳಲ್ಲಿ ವಾಣಿಜ್ಯ ವಲಯದಲ್ಲಿ ವಸತಿ ಉದ್ದೇಶಕ್ಕಾಗಿ ಅನುಮತಿಸಲಾಗುತ್ತಿರುವಂತೆ, ಈ ಪ್ರಾಧಿಕಾರದ ಮಹಾಯೋಜನೆಯ ವಲಯ ನಿಯಮಾವಳಿಗಳಂತೆ ವಾಣಿಜ್ಯ ವಲಯದಲ್ಲಿ ವಸತಿ ಉದ್ದೇಶಕ್ಕೆ ಅನುಮತಿಸುವ ಕುರಿತು ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತುತ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ಕ್ಕೆ ತಿದ್ದುಪಡಿ ತಂದು ಕಲಂ 14ಎ(3) ಯನ್ನು ಹಿಂಪಡೆಯಲಾಗಿದ್ದು, ಅದರಂತೆ ಮಹಾಯೋಜನೆಯಲ್ಲಿ ಕೈಗಾರಿಕಾ ವಲಯದಲ್ಲಿ ಬರುವ ಜಮೀನುಗಳನ್ನು ವಸತಿ ಮತ್ತು ವಾಣಿಜ್ಯ ಉದ್ದೇಶಕ್ಕೆ ಅನುಮತಿಸಬಾರದೆಂದು ಸರ್ಕಾರದ ಪತ್ರ ಸಂಖ್ಯೆ: ನಅಇ 09 ಬೆಮಪ್ರಾ 2017, ದಿನಾಂಕ:27.09.2018ರಲ್ಲಿ ತಿಳಿಸಲಾಗಿದೆ ಹಾಗೂ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಮಹಾಯೋಜನೆಯ ವಲಯ ನಿಯಮಾವಳಿಯಂತೆ ವಾಣಿಜ್ಯ ವಲಯದಲ್ಲಿ ವಸತಿಗೆ ಅನುಮತಿಸಲು ಅವಕಾಶ ನೀಡಲಾಗಿದೆ ಎಂದು ಸದಸ್ಯ–ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ವಾಣಿಜ್ಯ ವಲಯದಲ್ಲಿ ವಸತಿ ಉದ್ದೇಶಕ್ಕೆ ಅನುಮತಿಸುವ ಬಗ್ಗೆ ಸರ್ಕಾರದಿಂದ ಸೂಕ್ತ ಮಾರ್ಗದರ್ಶನವನ್ನು ನೀಡುವವರೆಗೆ ಮಹಾಯೋಜನೆಯ ವಲಯ ನಿಯಮಾವಳಿಯಂತೆ ಪ್ರಾಧಿಕಾರದಲ್ಲಿ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) ಮಹಾಯೋಜನೆಯ ವಲಯ ನಿಯಮಾವಳಿಗಳಂತೆ ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಭೂ ಪರಿವರ್ತನೆ ಸಂಬಂಧ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡುವ ಬಗ್ಗೆ.

******

ವಿಷಯಕ್ಕೆ ಸಂಬಂಧಿಸಿದಂತೆ, ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಭೂ ಪರಿವರ್ತಿಸುವ ವಿಧಾನವನ್ನು ಸರಳೀಕರಣಗೊಳಿಸಲು ನಿಗಧಿಪಡಿಸಿರುವ ಕಾಲಾವಧಿಯನ್ನು ಪರಿಷ್ಕರಿಸಿ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 67 ಎಲ್‌ಪಿಜಿ 2018 (ಭಾಗ–4), ಬೆಂಗಳೂರು ದಿನಾಂಕ:10.03.2020 ರಲ್ಲಿ ಸರ್ಕಾರದ ಆದೇಶ ಸಂಖ್ಯೆ:

ಆರ್‌ಡಿ 67 ಎಲ್‌ಪಿಜಿ 2018, ದಿನಾಂಕ:20.02.2019ರ ಆದೇಶ ಭಾಗದಲ್ಲಿನ ಷರತ್ತುಗಳ ಪೈಕಿ 7ನೇ ಷರತ್ತಿನಲ್ಲಿನ **"ಒಂದು ತಿಂಗಳ ಕಾಲಮಿತಿ"**ಯನ್ನು **"ಹದಿನೈದು ದಿನಗಳ ಕಾಲಮಿತಿಗೆ"** ಮತ್ತು 8ನೇ ಷರತ್ತಿನಲ್ಲಿನ **"60 (ಅರವತ್ತು) ದಿನಗಳ ಕಾಲಮಿತಿ"**ಯನ್ನು **"30(ಮೂವತ್ತು) ಕಾಲಮಿತಿ"**ಗೆ ಕಡಿತಗೊಳಿಸಿ ಆದೇಶಿಸಿದೆ.

ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರ ಪತ್ರ ಸಂಖ್ಯೆ: ಎಎಲ್‌ಎನ್/ಸಿಆರ್/11/2019–20 ದಿನಾಂಕ:07.05.2020ರಲ್ಲಿ ಇನ್ನು ಮುಂದೆ ಸರ್ಕಾರದ ಆದೇಶದಂತೆ Affidavit ಆಧಾರಿತ ಭೂ ಪರಿವರ್ತನೆ ತಂತ್ರಾಂಶದಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಲಾಗಿನ್‌ನಲ್ಲಿ ಪರಿಶೀಲಿಸಿಕೊಂಡು ನಿಗಧಿತ 15 ದಿನಗಳ ಅವಧಿಯೊಳಗೆ ವರದಿ ಸಲ್ಲಿಸಲು ತಿಳಿಸಲಾಗಿದೆ.

ಆದರೆ ಮಹಾಯೋಜನೆಯ ವಲಯನಿಯಮಾವಳಿಗಳನ್ವಯ ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿ, ಸಭೆಯ ತೀರ್ಮಾನದಂತೆ ಕ್ರಮವಹಿಸಬೇಕಾಗಿದ್ದು, ನಿಗಧಿತ ಅವಧಿಯಂತೆ ಪ್ರಾಧಿಕಾರದ ಸಭೆಗಳು ನಡೆಯುತ್ತಿಲ್ಲವಾದ್ದರಿಂದ ಹಾಗೂ 15 ದಿನಗಳೊಳಗೆ ಭೂ ಪರಿವರ್ತನೆಗೆ ಅಭಿಪ್ರಾಯ ನೀಡಬೇಕಾಗಿರುವುದರಿಂದ, ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಸಂಬಂಧಪಟ್ಟಂತೆ ಸದ್ಯಕ್ಕೆ ಭೂ ಪರಿವರ್ತನೆ ಪ್ರಕರಣಗಳನ್ನು ತಿರಸ್ಕರಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಭೂ ಪರಿವರ್ತನೆ ಸಂಬಂಧ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮಹಾಯೋಜನೆಯ ವಲಯನಿಯಮಾವಳಿಗಳಂತೆ ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಭೂ ಪರಿವರ್ತನೆ ಸಂಬಂಧ ನಿಗಧಿತ ಅವಧಿಯೊಳಗೆ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯ ನೀಡಬೇಕಾಗಿರುವುದರಿಂದ, ಪ್ರಾಧಿಕಾರದ ಮುಂದಿನ ಸಭೆಯ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಭೂ ಪರಿವರ್ತನೆ ಸಂಬಂಧ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯವನ್ನು ನೀಡಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

VI ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು

1) ಬೆಂಗಳೂರು –ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ ಕಛೇರಿಗೆ ಮಂಜೂರಾಗಿರುವ ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 26 ನಯೋಸೇ 2016, ದಿನಾಂಕ:10.06.2016ರಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ಸೃಜಿಸಲಾದ ತಾತ್ಕಾಲಿಕ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 477 ಮೈಅಪ್ರಾ 2017, ಬೆಂಗಳೂರು, ದಿನಾಂಕ:02.07.2018ರಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ತಾತ್ಕಾಲಿಕವಾಗಿ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸೃಜಿಸಲಾಗಿರುವ ಕೆಳಕಂಡ 08 ತಾಂತ್ರಿಕ ಹುದ್ದೆಗಳನ್ನು ಮತ್ತು 18 ವಿವಿಧ ವೃಂದದ ಹುದ್ದೆಗಳನ್ನು ಕ್ರಮವಾಗಿ ದಿನಾಂಕ:27.02.2018ರಿಂದ ಹಾಗೂ ದಿನಾಂಕ:19.02.2018 ರಿಂದ ಮುಂದಿನ ಎರಡು (02) ವರ್ಷದ ಅವಧಿಗೆ ಮುಂದುವರೆಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಪಟ್ಟಿ–1 (ತಾಂತ್ರಿಕ ಹುದ್ದೆಗಳು)

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು	1
2	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	1
3	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	2
4	ಕಿರಿಯ ನಗರಯೋಜಕರು	2
5	ಡ್ರಾಫ್ಟ್‌ಮೆನ್	2
	ಒಟ್ಟು	**08**

ಪಟ್ಟಿ–2 (ವಿವಿಧ ವೃಂದದ ಹುದ್ದೆಗಳು)

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	1
2	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	1
3	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	2
4	ನಗರ ಯೋಜಕರು	4
5	ಸಹಾಯಕ ನಗರ ಯೋಜಕರು	4
6	ಪ್ರಥಮ ದರ್ಜೆ ಸಹಾಯಕರು	1
7	ಶೀಘ್ರಲಿಪಿಗಾರರು	1
8	ಬೆರಳಚ್ಚುಗಾರರು	1
9	ಗ್ರೂಪ್–ಡಿ ನೌಕರರು	3
	ಒಟ್ಟು	**18**

ಸರ್ಕಾರದ ಆದೇಶ ಸಂಖ್ಯೆ: ನಅಇ 427 ಮೈಅಪ್ರಾ 2016, ಬೆಂಗಳೂರು, ದಿನಾಂಕ:25.06.2019ರಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾಗಿರುವ ತಲಾ ಒಂದು ಪ್ರಥಮ ದರ್ಜೆ ಸಹಾಯಕರು ಹಾಗೂ ಲೆಕ್ಕಾಧೀಕ್ಷಕರ ಹುದ್ದೆಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 427 ಮೈಅಪ್ರಾ 2016, ದಿನಾಂಕ:02.02.2018ರಂದು ಹೊರಡಿಸಿರುವ ಆದೇಶದಲ್ಲಿ ವಿಧಿಸಿರುವ ಷರತ್ತುಗೊಳಪಟ್ಟು ದಿನಾಂಕ:02.02.2019 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಲಾಗಿದೆ.

ಪ್ರಸ್ತುತ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ಪರಿಷ್ಕರಿಸಬೇಕಾಗಿರುವುದರಿಂದ ಹಾಗೂ ಪ್ರಾಧಿಕಾರದ ದಿನನಿತ್ಯದ ಕೆಲಸಗಳನ್ನು ನಿರ್ವಹಿಸಲು ಹೆಚ್ಚಿನ ಅಧಿಕಾರಿ/ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಹಾಗಾಗಿ, ಈ ಮೇಲ್ಕಂಡ ಎಲ್ಲಾ ತಾತ್ಕಾಲಿಕ ಹುದ್ದೆಗಳು ಪ್ರಾಧಿಕಾರದ ಕೆಲಸಗಳಿಗೆ ಅನಿವಾರ್ಯವಾಗಿರುವುದರಿಂದ, ಸದರಿ ಹುದ್ದೆಗಳನ್ನು ಮುಂದಿನ 02 ವರ್ಷದ ಅವಧಿಗೆ ಮುಂದುವರೆಸುವ ಸಂಬಂಧ ವಿಷಯವನ್ನು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತುತ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾಗಿರುವ ಎಲ್ಲಾ

ಹುದ್ದೆಗಳನ್ನು ಮುಂದಿನ 02 ವರ್ಷದ ಅವಧಿಗೆ ಮುಂದುವರೆಸಬಹುದೆಂದು, ಇದರಿಂದ ಪ್ರಾಧಿಕಾರಕ್ಕೆ ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲವೆಂದು ಸದಸ್ಯ-ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಆದರೆ, ಸಭೆಯಲ್ಲಿ ಹಾಜರಿದ್ದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಮಾತನಾಡಿ, ಸದರಿಯವರು ಈ ಹಿಂದೆ ಪ್ರಾಧಿಕಾರದಲ್ಲಿ ಸದಸ್ಯ-ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ:04.11.2019ರಂದು ಪ್ರಸ್ತುತ ಪ್ರಾಧಿಕಾರಕ್ಕೆ ಸರ್ಕಾರದಿಂದ ಸೃಜನೆಯಾಗಿರುವ ತಾತ್ಕಾಲಿಕ ಹುದ್ದೆಗಳ ಪೈಕಿ 01 ಸಹಾಯಕ ನಿರ್ದೇಶಕರು ಹಾಗೂ 04 ಸಹಾಯಕ ನಗರ ಯೋಜಕರ ಹುದ್ದೆಗಳನ್ನು ರದ್ದುಪಡಿಸಿ ಪ್ರಸ್ತುತ 18 ಹುದ್ದೆಗಳ ಪೈಕಿ 13 ಹುದ್ದೆಗಳನ್ನು ಖಾಯಂಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ಸಭೆಗೆ ತಿಳಿಸಿದರು. ಅದರಂತೆ, ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಈಗಾಗಲೇ ರದ್ದುಪಡಿಸಲು ಕೋರಿರುವ 01 ಸಹಾಯಕ ನಿರ್ದೇಶಕರು ಹಾಗೂ 04 ಸಹಾಯಕ ನಗರ ಯೋಜಕರ ಹುದ್ದೆಗಳನ್ನು ಹೊರತುಪಡಿಸಿ ಉಳಿದ 13 ಹುದ್ದೆಗಳನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ನಅಇ 427 ಮೈಅಪ್ರಾ 2016, ಬೆಂಗಳೂರು ದಿನಾಂಕ:25.06.2019ರಲ್ಲಿ ಸರ್ಕಾರದಿಂದ ಮಂಜೂರಾಗಿರುವ 01 ಪ್ರಥಮ ದರ್ಜೆ ಸಹಾಯಕರು ಮತ್ತು ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಸಹ ಮುಂದಿನ 02 ವರ್ಷದ ಅವಧಿಗೆ ಮುಂದುವರೆಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

5/11/2020

ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

05/11/2020.

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ
ಹಾಗೂ
ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ.,
ಬೆಂಗಳೂರು